ಇದಕ್ಕೆ ಕಾರಣ ಏನು? ಮನೆ ಬಿಡತಕ್ಕ ವಿಚಾರ ಮತ್ತು ಮನೆ ಬಾಡಿಗೆ ನಿಗದಿ ಮಾಡತಕ್ಕ ವಿಚಾರ, ಒಂದು ಮತ್ತು ಎರಡು ಭಾಗಗಳಲ್ಲಿ ಇವೆ. ಇದನ್ನು ಎಲ್ಲಕ್ಕೂ ಏಕೆ ಅನ್ವಯಿಸುವುದಿಲ್ಲ ಎನ್ನತಕ್ಕ ವಿಚಾರವೇ ನನಗೆ ಅರ್ಥವಾಗುವುದಿಲ್ಲ. ತಾವು ವಿಶದವಾಗಿ ಈ ಕಾನೂನಿನಲ್ಲಿ ಅದನ್ನು ಹೇಳಲಿಲ್ಲ. ಮುಂದುವರಿಯುತ್ತ ಪ್ರಾವಿಸೋನಲ್ಲಿ ಹೀಗೆ ಹೇಳಿದ್ದಾರೆ. "Provided that the said parts shall not apply to a building constructed after the first August 1957 for a period of five years from the date of construction of such building."

1957ನೆಯ ಆಗಸ್ಟ್ ತಿಂಗಳಲ್ಲಿ ಹೊಸದಾಗಿ ಕಟ್ಟಡ ಕಟ್ಟಿದರೆ 5 ವರ್ಷಗಳ ವರೆಗೂ ಇದು ಅನ್ವಯಿಸುವುದಿಲ್ಲ ಎಂದು ಹೇಳುತ್ತಾರೆ. ಹೀಗೆ ಏಕೆ ಮಾಡಿದ್ದಾರೆ? ಸ್ಟೇಟ್‌ಮೆಂಟ್ ಆಫ್ ಆಬ್ಜೆಕ್ಟ್ಸ್ ಅಂಡ್ ರೀಜನ್ಸ್‌ನಲ್ಲಾದರೂ ಇದಕ್ಕೆ ಕಾರಣ ಹೇಳಬೇಕಾಗಿತ್ತು. ಈ ಉದ್ದೇಶಕ್ಕಾಗಿ ಈ ಕಾರಣದಿಂದ ಬದಲಾವಣೆ ಮಾಡಿದ್ದೇವೆ ಎಂದು ಹೇಳದೆ ಹೋದರೆ, ಅಸೆಂಬ್ಲಿಯ ಸದಸ್ಯರಾದ ನಾವು ಯಾವ ಉದ್ದೇಶಕ್ಕೆ ಇದನ್ನು ಇಟ್ಟಿದ್ದೀರಿ ಎಂದು ತಿಳಿದುಕೊಳ್ಳಬೇಕು? ಪದಗಳು ಅರ್ಥವಾಗುತ್ತವೆ. ಆದರೆ ಉದ್ದೇಶ ಅರ್ಥವಾಗುವುದಿಲ್ಲ. ಆದುದರಿಂದ ಈ ವಿಚಾರದಲ್ಲಿ ತಾವು ವಿಶದವಾಗಿ ಹೇಳಬೇಕು. ಮಾನ್ಯ ಸದಸ್ಯರೂ ತಮ್ಮ ಅಭಿಪ್ರಾಯವನ್ನು ಕೊಡಬೇಕಾದರೆ ಅದರ ಉದ್ದೇಶವನ್ನು ಅರ್ಥ ಮಾಡಿಕೊಳ್ಳದೆ ಹೋದರೆ ಸಾಧ್ಯವಿಲ್ಲ. ಪಾರ್ಟ್ ಮೂರರಲ್ಲಿ ದುಡ್ಡನ್ನು ಡಿಪಾಸಿಟ್ ಮಾಡಬೇಕು ಎಂದು ಹೇಳಿದ್ದಾರೆ. ಮಾಲೀಕ ದುಡ್ಡು ತೆಗೆದುಕೊಳ್ಳದೆ ಹೋದರೆ ಡಿಫಾಲ್ಟರ್ ಎನ್ನುತ್ತಾರೆ. ಅದಕ್ಕೋಸ್ಕರ ದುಡ್ಡು ಡಿಪಾಸಿಟ್ ಇಟ್ಟಿದ್ದಾರೆ ಎಂದು ಹೇಳುವುದು. ಅದರಿಂದ ಕಷ್ಟ ನಿವೃತ್ತಿ ಆಗುತ್ತದೆ. ಮನೆಯಲ್ಲಿ ಇರತಕ್ಕವನನ್ನು ಯಾವ ರೀತಿ ಬಿಡಿಸುವುದು. ಮತ್ತು ಅವನಿಗೆ ಯಾವ ರೀತಿ ರಕ್ಷಣೆಯನ್ನು ಕೊಡಬೇಕು. ಎನ್ನುವುದನ್ನು 5ನೆಯ ಪಾರ್ಟ್‌ನಲ್ಲಿ ಹೇಳಿದ್ದಾರೆ. ಎರಡನೆಯ ಷೆಡ್ಯೂಲ್‌ನಲ್ಲಿ ದೊಡ್ಡ ಪಟ್ಟಿಕೊಟ್ಟು ಅದರಲ್ಲಿ ಇರತಕ್ಕ ಊರುಗಳಿಗೆ ಇದು ಅನ್ವಯಿಸುತ್ತದೆ ಎಂದು ಹೇಳಿದ್ದಾರೆ. ಇದನ್ನೂ ಮೊದಲನೆಯ ಭಾಗದಲ್ಲಿ ಇರುವ ಊರುಗಳಿಗೂ ಅನ್ವಯಿಸಬೇಕು ಎಂದು ಮಾಡಿದ್ದರೆ ಒಳ್ಳೆಯದು. ಅದನ್ನು ಮಾಡಲಿಲ್ಲ ದಾವಣಗೆರೆಗೆ ಒಂದು ಕಾನೂನು, ಚಿತ್ರದುರ್ಗಕ್ಕೆ ಮತ್ತೊಂದು ಕಾನೂನು, ಬೆಂಗಳೂರು, ಮೈಸೂರು ಮತ್ತು ಗುಲ್ಬರ್ಗಕ್ಕೆ ಮತ್ತೊಂದು ಕಾನೂನು, ಈ ರೀತಿ ಮೈಸೂರು ಸಂಸ್ಥಾನದಲ್ಲೇ ಮಾಡತಕ್ಕದ್ದು ಸರಿಯಲ್ಲ. ಇದು ರಾಜ್ಯಾಂಗಕ್ಕೆ ವಿರೋಧವಾಗುತ್ತದೆ.

ಒಂದು ಭಾಗಕ್ಕೂ ಮತ್ತೊಂದು ಭಾಗಕ್ಕೂ ವ್ಯತ್ಯಾಸ ಕಲ್ಪಿಸತಕ್ಕ ಕಾನೂನನ್ನು ಈಗ ರಚಿಸಲಾಗಿದೆ. ಇದು ರಾಜ್ಯಾಂಗಕ್ಕೆ ವಿರೋಧವಾಗುತ್ತದೆ. ಆದುದರಿಂದ ನಾನು ಹೇಳುವುದು ಇಷ್ಟು: ಇದನ್ನು ತಾವು ಏತಕ್ಕೆ ಬಿಟ್ಟಿದ್ದೀರಿ? ಇದರ ಉದ್ದೇಶವೇನು? ಈ ಮಸೂದೆಯಲ್ಲಿ ನಾನಾ ನಮೂನೆಯ ಕಾನೂನುಗಳು ಏಕೆ ಇರಬೇಕು ಎಂದು ಕೇಳುತ್ತೇನೆ.

ಆರನೆಯ ಪಾರ್ಟ್ ಹೋಟೇಲು ಮತ್ತು ಲಾಡ್ಜಿಂಗ್. What is the difference between hotel and lodging? ಹೋಟೇಲುಗಳಲ್ಲಿ ವಾಸವಾಗಿರಬಹುದು, ಊಟ ಮಾಡಬಹುದು. ಇದರಲ್ಲಿ ಏನಾದರೂ ವ್ಯತ್ಯಾಸ ಇದೆಯೇ ಯೋಚನೆಮಾಡಿ. ಅಕಸ್ಮಾತ್ತಾಗಿ ಹೋಟೇಲಿನಲ್ಲಿ ಊಟ ಮಾಡದೆ ಹೋದರೆ ಯಾವ ಕಾನೂನು ಅನ್ವಯಿಸುತ್ತದೋ ಗೊತ್ತಾಗುವುದಿಲ್ಲ. ಹೀಗೆ ದೊಡ್ಡ ವ್ಯತ್ಯಾಸ ಮಾಡಿದ್ದಾರೆ. ಈ ಕಾನೂನಿನಲ್ಲಿ ಫೇರ್ ರೇಟ್ ಬೇರೆ, ಫೇರ್ ರೆಂಟ್ ಬೇರೆ ಇದೆ. ಹೋಟೇಲುಗಳಲ್ಲಿ ರೂಮ್ಸ್ ತೆಗೆದುಕೊಳ್ಳದವರಿಗೆ ಫೇರ್ ರೆಂಟ್! ಈ ವಿಚಾರದಲ್ಲಿ ಸ್ವಲ್ಪ ಆಲೋಚನೆ ಮಾಡಬೇಕು. ಊಟಕ್ಕೂ ರೆಂಟ್ ಫಿಕ್ಸ್ ಮಾಡುವುದು? ವುಡ್‌ಲ್ಯಾಂಡ್ ಹೋಟೇಲಿನಲ್ಲಿ

ಊಟ ಮಾಡುವವರಿಗೆ ಒಂದು ಊಟಕ್ಕೆ 1.25 ನ.ಪೈಗೆ ಇಂತಹದು ಇರಬೇಕು ಎಂದು ಮಾಡುತ್ತೀರಾ ? ಒಂದು ವೇಳೆ ಡೀಟೈಲ್ಸ್ ಬೇಕಾದರೆ ಸೋಮವಾರ ಇಷ್ಟು, ಮಂಗಳವಾರ ಇಷ್ಟು, ಬುಧವಾರ ಇಷ್ಟು ಎಂದು ವಾರಗಳ ಮೇಲೆ ರೇಟನ್ನು ನಿಗದಿ ಮಾಡುತ್ತೀರಾ ? ಇದು ಎಲ್ಲಾ ಮಾಡತಕ್ಕದ್ದು ತಪ್ಪು ಎಂದು ಹೇಳುತ್ತೇನೆ. ಹಿಂದಿನ ಕಾನೂನನ್ನು ಸಡಿಲ ಮಾಡಿ ಬಿಲ್ಲನ್ನು ಮಾತ್ರ ಲಂಬಿಸಿ ದೊಡ್ಡದು ಮಾಡಿ, ಮನಸ್ಸಿಗೆ ಬಂದಹಾಗೆ ವಿಶದೀಕರಿಸುವುದಕ್ಕೆ ಬೇಕಾದಷ್ಟು ಅವಕಾಶ ಮಾಡಿದ್ದೀರಿ. ಯಾವ ಉದ್ದೇಶವನ್ನು ಬಾಯಲ್ಲಿ ಹೇಳುತ್ತೀರಿ ಅದನ್ನು ಕಾರ್ಯತಃ ಮಾಡದೆ ಇರುವುದಕ್ಕೆ ಇಂಥ ಸನ್ನಿವೇಶ ಕಲ್ಪನೆಮಾಡಿ ಅಷ್ಟೊಂದು ಆಗದೆ ಇರುವ ಕಾನೂನನ್ನು ಮಾಡಬೇಕು ಎಂಬ ಚಪಲ ಮಾತ್ರ ಇರುವ ಹಾಗೆ ಕಾಣುತ್ತದೆ. ಆದುದರಿಂದ ಈ ಬಿಲ್ಲಿನಲ್ಲಿ ಇಷ್ಟು ಸೆಕ್ಷನ್ಸ್ ಇರಬಾರದು. ಆವಶ್ಯಕವಾಗಿ ಎಷ್ಟು ಇರಬೇಕೋ ಅಷ್ಟು ಇರಬೇಕೇ ಹೊರತು, ಆವಶ್ಯಕತೆ ಮೀರಿ ಹೆಚ್ಚಿಗೆ ಇರಬಾರದು. ಐದನೆಯ ಪಾರ್ಟಿನ ಹೆಡ್ಡಿಂಗ್ಸ್‌ನಲ್ಲಿ "Control of eviction of tenants and obligation of land-lords" ವಿಷಯವನ್ನು ಹೇಳಿದ್ದಾರೆ. ಮನೆಯ ಮಾಲಿಕನ ಕರ್ತವ್ಯ ಮತ್ತು ಮನೆಯಲ್ಲಿ ವಾಸವಾಗಿರತಕ್ಕ ಬಾಡಿಗೆದಾರನ ಸಂರಕ್ಷಣೆ ಮಾಡುವ ವಿಷಯ ಇದರಲ್ಲಿ ಇರಬೇಕು. ಈ ಚಾಪ್ಟರನ್ನು ಮೊದಲಿನಿಂದ ಕೊನೆಯವರೆಗೆ ನೋಡಿದರೂ ಈ ರೀತಿ ಸಂರಕ್ಷಣೆ ಮಾಡಬೇಕು, ಆ ರೀತಿ ಮಾಡಬೇಕು ಎಂದು ಎಲ್ಲೂ ಇಲ್ಲ. ಎಲ್ಲಾ ನೆಗೇಟಿವೇ ಹೊರತು ಪಾಸಿಟಿವ್ ಇಲ್ಲ. ಇಂತಹದು ಆಗದೆ ಹೋದರೆ ಹಾಗೆ ಮಾಡಬೇಕು, ಹೀಗೆ ಮಾಡಬೇಕು ಎಂದು ಹೇಳಿದೆ. ಮನೆಯ ಮಾಲೀಕ ಈ ರೀತಿ ಮಾಡಬಾರದು, ಹಾಗೆ ಮಾಡುವುದರಿಂದ ಅವನು ತಕ್ಸೀರಿಗೆ ಈಡಾಗುತ್ತಾನೆಂದು ಹೇಳುತ್ತಾರೆ. Protection of tenants against eviction ನಲ್ಲಿ ಹಾಗಿರಬಾರದು, ಹೀಗಿರಬಾರದು ಎಂದು ಹೇಳುವುದು ಸರಿಯಲ್ಲ. ಇವೆಲ್ಲ ಸಣ್ಣ ವಿಚಾರಗಳು.

4-30 P.M.

ಇನ್ನು ನಾನು ಎರಡೇ ಎರಡು ಕ್ಲಾಜುಗಳ ವಿಚಾರವಾಗಿ ಮಾತನಾಡುತ್ತೇನೆ. ಈ ಮಸೂದೆಯಲ್ಲಿ ಅಭಾಸವಾಗತಕ್ಕ ಕ್ಲಾಜುಗಳು ತುಂಬ ಇವೆ. ಇದನ್ನೆಲ್ಲ ಸೆಲೆಕ್ಟ್ ಕಮಿಟಿಯವರು ಸ್ವಲ್ಪ ಹುಷಾರಾಗಿ ನೋಡಬೇಕು. ಅವರು ಇದನ್ನು ಎಚ್ಚರಿಕೆಯಿಂದ ನೋಡದೆ ಹೋದರೆ ತೊಂದರೆಯಾಗುತ್ತದೆ. ಇದರಲ್ಲಿ ಹಾವು ಚೇಳುಗಳಿವೆ. ಈ ಮಸೂದೆ ಒಂದು ಸಮುದ್ರದೋಪಾದಿಯಲ್ಲಿದೆ. ಸಮುದ್ರದಲ್ಲಿ ಹೇಗೆ ಕ್ರೂರ ಜಂತುಗಳಿದ್ದರೂ ಅದು ಮೇಲ್ಗಡೆಯಲ್ಲಿ ಹೇಗೆ ಗಂಭೀರವಾಗಿ ಕಾಣುತ್ತದೆಯೋ ಅದೇ ರೀತಿ ಈ ಮಸೂದೆಯೂ ಇದೆ.

14ನೆಯ ಕ್ಲಾಜಿನಲ್ಲಿ Rent in excess of fair rent not recoverable ಎನ್ನುವ ವಿಚಾರದಲ್ಲಿ ಬೊಂಬಾಯಿನಲ್ಲಿ ಈ ರೀತಿ ಇದೆ, ಕೊಡಗಿನಲ್ಲಿ ಆ ರೀತಿ ಇದೆ, ಮೈಸೂರಿನಲ್ಲಿ ಮತ್ತೊಂದು ರೀತಿ ಇದೆ ಎಂದು ಆಯಾ ಭಾಗದಲ್ಲಿ ಹೇಗೆ ಇತ್ತೋ ಅದನ್ನೇ ಇಟ್ಟುಕೊಂಡು ಆಯಾ ತಾರೀಖಿನಲ್ಲಿ ಆಯಾ ಪ್ರದೇಶದಲ್ಲಿ ಏನು rent ಇತ್ತು ಅದನ್ನೇ fair rent ಎಂದು ನಿಗದಿ ಮಾಡಬೇಕೆಂದು ಹೇಳಿದ್ದಾರೆ. ಏಕೆ ಇಷ್ಟು ಚೋಸ ? ನಮ್ಮಲ್ಲಿ ಕಾನೂನು ಮಾಡತಕ್ಕ ಶಕ್ತಿಯುಳ್ಳ ಜನಗಳಿಗೆ ಅಭಾವವಿದೆಯೇ ? ಸ್ವಬುದ್ಧಿಯನ್ನು ಉಪಯೋಗಿಸಿ ಏನನ್ನೂ ಬರೆದಿಲ್ಲ. ಅಲ್ಲಿಂದ ಸ್ವಲ್ಪ ಇಲ್ಲಿಂದ ಸ್ವಲ್ಪ ತೆಗೆದುಕೊಂಡು 'ಪಂಚರಂಗಿ' ಹಾಗೆ ಮಾಡಿದ್ದಾರೆ. ಎಲ್ಲ ಕಡೆಯೂ ಒಂದೇ ನಮೂನೆಯ ಕಾನೂನನ್ನು ಮಾಡುತ್ತೇನೆಂದು ಪಂಚರಂಗಿ ಹಾಗೆ ಮಾಡಿರತಕ್ಕದ್ದು ಸರಿಯಲ್ಲ. ಕಾನೂನುಗಳನ್ನು ಸಮೀಕರಣ ಮಾಡಬೇಕೆಂಬ ಉದ್ದೇಶವಿದ್ದರೆ ಅದನ್ನು ಎಷ್ಟರ ಮಟ್ಟಿಗೆ ಯಾವ ರೀತಿ ಮಾಡಬೇಕು ಎಂದು ನೋಡಿ ಮಾಡಬೇಕು. ಆದರೆ ಇದರಲ್ಲಿ ಪ್ರತಿಯೊಂದು ಕಾನೂನನ್ನೂ ಹಿಡಿದುಕೊಂಡೇ ಮಾಡಿದ್ದಾರೆ. ಹಿಂದಿನ ಕಾನೂನುಗಳಿಲ್ಲದೆ ಬಗೆಹರಿಯುವುದಿಲ್ಲ. ಕೋರ್ಟ್‌ಗಳಲ್ಲಿ ಆಗಿರುವ ಕೆಲವು ತೀರ್ಮಾನಗಳು, ಅದರಿಂದ ಬಂದಿರತಕ್ಕ ತೊಡಕುಗಳು ಇವುಗಳಿಂದ ಲೆಜಿಸ್ಲೇಟರುಗಳ ಮುಖಕ್ಕೆ ಮಸಿ ಬಳೆದಿರಿ. The Legislators were not competent to frame such a rule. Therefore by judging the standpoint of natural justice and common law it is not enforceable ಎಂದು ಹೇಳುತ್ತಾರೆ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ Motor Vehicles Act ಸಂಬಂಧದಲ್ಲಿ ಮಾಡಿರುವ ರೂಲ್ಸ್‌ನಲ್ಲಿ ಅಪೀಲ್ ಬಗ್ಗೆ ತಿಳಿಸಿದ್ದಾರೆ. ಅದರ ವಿಚಾರದಲ್ಲಿ The Mysore Government is incompetent to frame such a rule. Therefore it is void though it is a part of the rules ಎಂದು ಹೇಳಿರತಕ್ಕ ತೀರ್ಮಾನಗಳು ಬರುತ್ತವೆ. ಮೋಟಾರ್ ವೆಹಿಕಲ್ಸ್ ಆಕ್ಟ್‌ನ 64ನೆಯ ಸೆಕ್ಷನ್ ಪ್ರಕಾರ ಅಪೀಲ್ ಆಗುವುದಿಲ್ಲ. ಅದನ್ನು ತಮ್ಮ ಅಧಿಕಾರಕ್ಕೆ ಒಳಪಡಿಸಿಲ್ಲ, ಕಾನೂನನ್ನೂ ಅರಿತುಕೊಂಡಿಲ್ಲ. It will not have the binding nature of a Bill ಎಂದು ಹೇಳಿದೆ. ಅಂದಮೇಲೆ ಇದು ಎಂತಹದು ? ಕಾನೂನುಗಳನ್ನು ನೋಡಿಕೊಂಡು ಸರಿಯಾಗಿ ಆಲೋಚನೆಮಾಡಿ ಬರೆಯಬೇಕೋ, ಬೇಡವೋ ? ಇಂಥ ವಿಚಾರಗಳು ಈ ಮಸೂದೆಯಲ್ಲಿ ಬೇಕಾದಷ್ಟಿವೆ. ಒಬ್ಬ ಮನುಷ್ಯನಿಗೆ ಸ್ವಾಭಾವಿಕವಾಗಿರತಕ್ಕ ಹಕ್ಕುಗಳಿಗೆ ಅಡ್ಡಿ ಬರತಕ್ಕ ಕಾನೂನು ಇದು ಎಂದು ಹೇಳಬಹುದು. ಈ ಕ್ಲಾಜಿನಲ್ಲಿ ಒಂದು ಕಡೆಗೆ 1952ನೆಯ ಇಸವಿಯ ಲೆಕ್ಕ, ಒಂದು ಕಡೆಗೆ 1942ನೆಯ ಇಸವಿಯ ಲೆಕ್ಕ, ಮತ್ತೊಂದು ಕಡೆಗೆ 1947ನೆಯ ಇಸವಿಯ ಲೆಕ್ಕ ಹೀಗೆ ಒಂದೊಂದು ಕಡೆಗೆ ಒಂದೊಂದು ತಾರೀಖನ್ನು ಗೊತ್ತುಮಾಡಿರುತ್ತೀರಿ. ಇದೆಲ್ಲ ಸರಿಯಲ್ಲ. ಇದನ್ನು ಸರಿಪಡಿಸಬೇಕು.

ಇನ್ನು 17ನೆಯ ಕ್ಲಾಜಿನ ವಿಚಾರ. ಈ ಸೆಕ್ಷನ್‌ಗೆ ಸಂಬಂಧಪಟ್ಟಂತೆ ಹೈ ಕೋರ್ಟಿನಲ್ಲಿ ದೊಡ್ಡ ಆರ್ಗ್ಯುಮೆಂಟ್ ನಡೆಯಿತು. ಈ ಕ್ಲಾಜಿನಲ್ಲಿ ಅಲ್ಲಿಯದು, ಇಲ್ಲಿಯದು ಎಲ್ಲವನ್ನೂ ಸಮೀಕರಣ ಮಾಡಿಟ್ಟುಕೊಂಡಿದ್ದೀರಿ. ಇದರಲ್ಲಿ ಹೀಗೆ ಹೇಳಿದೆ:

"17 (*a*) the land lord shall not claim, receive or stipulate for the payment of any premium or other like sum in addition to such fair rent or save as provided in sections 15 and 16 any rent in excess of such fair rent."

'Payment of any premium' ಎಂದರೇನು ? 'premium or other like sum' ಎಂದರೇನು ? ನಾನು ಒಂದು ನಿದರ್ಶನವನ್ನು ಕೊಡುತ್ತೇನೆ. ನಾನು ಒಂದು ಸಿನಿಮಾ ಮಂದಿರವನ್ನು ಕಟ್ಟುತ್ತೇನೆ.

(ಶ್ರೀ ಕೆ. ಕೆಂಚಪ್ಪ)

ಅದಕ್ಕೆ ದುಡ್ಡು ಕಡಮೆಬೀಳುತ್ತದೆ. 50 ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಕಟ್ಟಡವನ್ನು ಪೂರ್ತಿಮಾಡಿ ತಿಂಗಳೊಂದಕ್ಕೆ 2500 ರೂಪಾಯಿ ಬಾಡಿಗೆ ಕೊಡಬೇಕೆಂದು ತಿಳಿಸಿ ಆ ಮನುಷ್ಯನಿಗೆ ಬಾಡಿಗೆಗೆ ಕೊಡುತ್ತೇನೆ. ಈ ಕ್ಲಾಜ್‌ನ ಪ್ರಕಾರ the payment becomes void. Is it part of the transaction between the two parties or is it something else? How have you excluded that? ಇಂಥ ಸಂದರ್ಭಗಳಲ್ಲಿ ಯಾವ ರೀತಿ ಮಾಡುತ್ತೀರಿ? Premium ಎಂದರೆ ಏನು? ದೇವರಿಗೇ ಗೊತ್ತು. ಪ್ರೀಮಿಯಂ ಎಂದರೆ ಇನ್ಶೂರೆನ್ಸ್ ಕಂಪನಿಗಳಿಗೆ ಪ್ರತಿ ತಿಂಗಳೂ ಅಥವಾ ಪ್ರತಿವರ್ಷ ಕಟ್ಟುವ ಮೊಬಲಗಿಗೆ ಪ್ರೀಮಿಯಂ ಎಂದು ತಿಳಿದುಕೊಂಡಿದ್ದೇವೆ. ಡಿಕ್ಷನರಿಯನ್ನು ತೆಗೆದು ನೋಡಿದ್ದರಲ್ಲಿ ಮರ್ಜಿಗೋಸ್ಕರ ಕೊಡತಕ್ಕ ಹಣ ಅಥವಾ unlawful bargain ಎಂದು ಅರ್ಥವಾಯಿತು. ಇದನ್ನು ಏಕೆ ವಿವರಿಸಬಾರದು? ಇಂಥಾ ಜಿಜ್ಞಾಸೆಗೆ ಒಳಗಾಗಿರತಕ್ಕ ದೊಡ್ಡ ಪದವನ್ನು ವಿವರಿಸದೆ ಇದ್ದರೆ ಹೇಗೆ? In excess of such rent ಎನ್ನುವುದರೊಳಗೆ what is the meaning of the word 'such'? How do you explain that? ಇದನ್ನು ತಾವು ಆಲೋಚನೆ ಮಾಡಬೇಕು.

> "Provided that the land—lord may receive or stipulate, for the payment of an amount not exceeding two months' rent by way of advance."

You have no right to take more than two months' rent.

ಹಾಗೆಂದರೇನು! ಉದಾಹರಣೆಗಾಗಿ ನಾನು ಮನೆ ಕಟ್ಟುವುದಕ್ಕೋಸ್ಕರ ಏನೋ ಒಂದು ಲೋನ್ ತೆಗೆದುಕೊಂಡರೆ, ಅದಕ್ಕೆ ಮೋಸ ಮಾಡಿದರೆ ಅದಕ್ಕೇನು ಮಾಡುತ್ತೀರಿ? ಅದನ್ನು ವಿಶದೀಕರಿಸಲಿಕ್ಕಾಗಲಿಲ್ಲವೇ! ನೀವು ಒಂದು ಇಂಟರ್‌ಪ್ರಿಟೇಷನ್ ಕೊಡಬಹುದು. ಇನ್ನು ಏನೇನು ಹೇಳುತ್ತಿದ್ದೀರಿ. ಯಾವ ಮರಕ್ಕೆ ಹೋಗಿ ನೇಣು ಹಾಕಿಕೊಳ್ಳಬೇಕು? ನಿಮ್ಮ ವಿಧೇಯಕದಲ್ಲಿ ಸರಿಯಾದ ನೀತಿ ನಿಯಮಗಳುಳ್ಳ ಸೆಕ್ಷನ್ ಎಲ್ಲಿದೆ? ಈ ಒಂದು ಸೆಕ್ಷನ್ನಿನಲ್ಲಿಯೇ ಇಷ್ಟು ಅನಾಮಲೀಸ್ ಇರುವಾಗ ಇನ್ನು ಇತರ ಸೆಕ್ಷನ್ನುಗಳಲ್ಲಿ ಹಾವು, ಚೇಳು, ಕ್ರೂರ ಮೃಗಗಳು, ಸಣ್ಣ ಸಣ್ಣ ಪ್ರಾಣಿಗಳನ್ನು ನುಂಗತಕ್ಕ ತಿಮಿಂಗಲಗಳು, ಬಾಯಿಂದ ಕಡಿಯುವಂತಹವು, ಬಾಲದಿಂದ ಕುಟುಕುವಂತಹವುಗಳು ಇನ್ನೆಷ್ಟು ಸೇರಿವೆಯೋ ನನಗಂತೂ ಗೊತ್ತಾಗಲಿಲ್ಲ.

> "(2) Where the fair rent of a building has not been so determined,
>
> (*a*) the landlord shall not after the commencement of this Act receive or stipulate for the payment of any premium or other like sum in addition to the agreed rent;
>
> (*b*) save as provided in clause (*a*) any sum paid in excess of the agreed rent under this Act in consideration of the grant, continuance or renewal of the tenancy of the building after such commencement shall be refunded by the—land lord to the person by whom it was paid"

ಒಂದು ಫೇರ್ ರೆಂಟ್ ಡಿಟರ್‌ಮಿನ್ ಆಗಿಲ್ಲ ಅಂದರೆ ಈ ಕಾನೂನು ಬರುವುದಕ್ಕೆ ಮುಂಚಿತವಾಗಿ ಸುಮಾರು ಒಂದೂವರೆ ಲಕ್ಷ ಅಥವಾ ಎರಡು ಲಕ್ಷ ರೂಪಾಯಿಗಳಲ್ಲಿ ಯಾವನಾದರೂ ಒಬ್ಬ ಕಟ್ಟಡವನ್ನು ಕಟ್ಟಿ ಮುಗಿಸಿದ್ದಾನೆ. ಅಂದರೆ ಅವನು ಅದಕ್ಕಾಗಿ ಹೆಚ್ಚಿಗೆ ಲೋನ್ ತೆಗೆದುಕೊಂಡಿದ್ದಾನೆಂದು ಹೇಳಬೇಕಾಗುತ್ತದೆ. ಹಿಂದೆ ಒಂದೂವರೆ ಲಕ್ಷ ರೂಪಾಯಿಗಳನ್ನು ಕಟ್ಟಡಕ್ಕೆ ಕೊಟ್ಟಿದ್ದರೆ ಈಗ ಅದನ್ನು ವಾಪಸ್ಸು ಕೊಟ್ಟುಬಿಡು ಎಂದರೆ ಅವನ ಮನೆ ಉಳಿಯಬೇಕೇ, ಬೇಡವೇ? ಅವನು ಏನಾಗಬೇಕು! ಸ್ವಲ್ಪ ಯೋಚನೆ ಮಾಡಬೇಕು. ತಮ್ಮ ಇನ್‌ಫ್ಲುಯನ್ಸ್ ಒಂದು ಇರಬಹುದು. ಆದರೆ ಸರಿಯಾಗಿ ವಿಶದವಾಗಿ ಈ ವಿಧೇಯಕದ ಪದಗಳು ಅರ್ಥವನ್ನು ಕೊಡುತ್ತಾ ಇಲ್ಲ. ಇದರಿಂದ ಜಿಜ್ಞಾಸೆಗೆ ಕಾರಣವಾಗಿದೆ. ಆದ್ದರಿಂದ ಇದನ್ನು ವಿಶದೀಕರಿಸಲಿಕ್ಕೆಬೇಕು. ನಾನು ಹೇಳುತ್ತಿರುವುದು ತಾವು ಇದನ್ನು ಒಂದು ಕೆಟ್ಟ ಉದ್ದೇಶದಿಂದ ಇಟ್ಟಿದ್ದೀರೆಂದಲ್ಲ. ಏನೇನು ಸಂದರ್ಭಗಳು ಬರುತ್ತವೋ ಅವೆಲ್ಲವನ್ನೂ ಆಲೋಚನೆ ಮಾಡುವುದು ಕಷ್ಟ. ಅದಕ್ಕೋಸ್ಕರವಾಗಿ ಪೂರ್ಣಾನುಭವ ಪಡೆದಿರಬೇಕು. ಇರತಕ್ಕ ಸಂದೇಹವನ್ನು ಹೋಗಲಾಡಿಸಬೇಕು. ಆ ರೀತಿ ಮಾಡುವಾಗ ನಮಗೆ ಸೂಚನೆ ಮಾಡತಕ್ಕ ಮತ್ತು ಸಲಹೆಗಳನ್ನು ಕೊಡತಕ್ಕ ಜವಾಬ್ದಾರಿ ಇದೆ. ಆ ರೀತಿ ಸೂಚನೆ ಕೊಡುವ ಮೂಲಕ ಸರ್ಕಾರದವರು ಸರಿಯಾದ ವ್ಯಾಪ್ತಿಯನ್ನು ನೋಡಿ ಆಲೋಚನೆ ಮಾಡಬೇಕು.

ಎಷ್ಟೋ ವೇಳೆ ಲ್ಯಾಂಡ್‌ಲಾರ್ಡ್ಸ್, ಮತ್ತು ಟೆನೆಂಟುಗಳು ಕೋರ್ಟುಗಳಲ್ಲಿ ಕಕ್ಷಿಗಾರರಾಗಿ ಇರುತ್ತಾರೆ. ಆಗ ಸಿವಿಲ್ ಕೋರ್ಟಿನಲ್ಲಿ ಒಂದು ಇಂಟರ್‌ಪ್ರಿಟೇಷನ್ ಬರುತ್ತದೆ, ಕ್ರಿಮಿನಲ್ ಕೋರ್ಟಿನಲ್ಲಿಯೂ ಒಂದು ಇಂಟರ್‌ಪ್ರಿಟೇಷನ್ ಬರುತ್ತದೆ.

> "Any land-lord who contravenes the provisions of sub-section (1) or sub-section (2) and any tenant or other person who contravenes the provisions of sub-section (4) shall, on conviction, be punished with fine which may extend to five hundred rupees."

In case of doubt or an element of doubt the benefit is given to the accused in a criminal court. Where is the logic of it in a civil court?

ಶ್ರೀ ಕಡಿದಾಳ್ ಮಂಜಪ್ಪ.—ಈ ನಿಬಂಧನೆಗಳೆಲ್ಲಾ ಈಗಿರತಕ್ಕ ಕಾನೂನಿನಲ್ಲಿಯೇ ಇವೆಯಲ್ಲ!

ಶ್ರೀ ಕೆ. ಕೆಂಚಪ್ಪ.—ಇವೆಯೆಂದು ನಾನೂ ಹೇಳುತ್ತೇನೆ. ಏನೂ ಅನುಮಾನವೇ ಇಲ್ಲ. ಅಲ್ಲಿನದೊಂದು

ಕಾನೂನು ಇಲ್ಲನದೊಂದು ಕಾನೂನು ಹಾಕಿ ಇದರಲ್ಲಿ ಪಂಚರಂಗಿ ಕಾನೂನು ನೋಡಬೇಕೆಂದು ಹೊರಟಿದ್ದೀರಿ. ಇದು ಎಲ್ಲೆಲ್ಲಿತ್ತು, ಎಲ್ಲೆಲ್ಲಿಲ್ಲ ಎಂದು ಏನೂ ಹೇಳಲಿಲ್ಲ.

Because of the bitter experience that all of us have got please reconsider so that you may redraft the Bill.

ಇನ್ನು ಎರಡು ತಿಂಗಳ ರೆಂಟನ್ನು ಅಡ್ವಾನ್ಸಾಗಿ ಕೊಡಬೇಕು ಎಂಬುದಾಗಿ ಹೇಳಿದ್ದುದನ್ನು ಈಗ ತೆಗೆದುಹಾಕಿದ್ದೀರಿ. ಅದನ್ನು ಇಟ್ಟುಕೊಳ್ಳಬೇಕು. ನಾನು ಬಹಳ ಸಮಯವನ್ನು ತೆಗೆದುಕೊಂಡೆನೆಂದು ಆಗಲೇ ಬೆಲ್ ಆಗುತ್ತಿದೆ. ಇನ್ನೊಂದು ವಿಷಯವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಯಾವುದಾದರೂ ಒಂದು ಕಾನೂನನ್ನು ಮಾಡುವಾಗ ಜನರಿಗೆ ಅನ್ಯಾಯವಾಗುವಂತಹ ರೀತಿಯಲ್ಲಿ ಬರೆಯಬಾರದು. ನಾನು ಈಗ ಇಲ್ಲಿ ಪ್ರಜೆಗಳ ಜವಾಬ್ದಾರಿಯುತನಾದ ಸದಸ್ಯನಾಗಿ ಕುಳಿತಿದ್ದೇನೆ. ಅದರಿಂದಾಗಿ ಪ್ರಜೆಗಳು ಸರ್ಕಾರದಲ್ಲಿ ಕಾನೂನುಗಳನ್ನು ಯೋಗ್ಯ ರೀತಿಯಲ್ಲಿ ಮಾಡಿ ತಮ್ಮ ದಕ್ಷತೆಯನ್ನು ಸರಿಯಾಗಿ ತೋರಿಸುತ್ತಿದ್ದಾರೋ ಇಲ್ಲವೋ ಎಂಬುದನ್ನು ಕಾದು ನೋಡುತ್ತಿದ್ದಾರೆ. ಅದನ್ನರಿತುಕೊಂಡು ಒಂದು ದೊಡ್ಡ ಜವಾಬ್ದಾರಿಯಿಂದ ನಾವು ಇಲ್ಲಿ ಕಾನೂನುಗಳನ್ನು ಪಾಸ್ ಮಾಡಬೇಕಾಗಿದೆ. ಅದನ್ನು ಬಿಟ್ಟು ಅಲ್ಲೊಂದು ಇಲ್ಲೊಂದು ಆರಿಸಿಕೊಂಡು ಕಾನೂನನ್ನು ಮಾಡುವುದು ಸರಿಯಲ್ಲ. ಕಾನೂನುಗಳು ಯೋಗ್ಯ ರೀತಿಯಲ್ಲಿ ಇರಬೇಕು. ಹಿಂದಿನ ಅನುಭವ ಮತ್ತು ಈಗಿನ ಅನುಭವಗಳೆರಡನ್ನೂ ಇಟ್ಟುಕೊಂಡು ಕಲಸು ಮೇಲೋಗರ ಮಾಡಿದರೆ ಪ್ರಯೋಜನವಿಲ್ಲ. ಅದು ಕೇವಲ "ಹ್ಯಾಂಡಿಕ್ರಾಫ್ಟ್" ಅಂದರೆ ಕರಕುಶಲತೆ ಆದ ಹಾಗಾಗುತ್ತದೆ. ಯಾರೋ ಪುಣ್ಯಾತ್ಮ ಬರೆದ ಅಕ್ಷರಕ್ಕೆ ಅಕ್ಷರ ಎಂದು ಹೇಳುತ್ತಾರೆ.

Whether it is a donkey or a horse because they are like-animals (*Laughter*)

ಒಟ್ಟಿನಲ್ಲಿ ತಾವು ದಯವಿಟ್ಟು ಸಂಯುಕ್ತ ವಿಶಿಷ್ಟ ಸಮಿತಿಯವರಿಗೆ ಇದನ್ನು ಚರ್ಚೆ ಮಾಡಲು ದೀರ್ಘಾವಕಾಶ ಕೊಟ್ಟು, ಇದರಲ್ಲಿರತಕ್ಕ ನ್ಯೂನತೆಗಳನ್ನು ತೆಗೆದುಹಾಕಿ, ಈ ಕಾನೂನು ಇರಬೇಕೇ, ಬೇಡವೇ ಎಂಬುವನ್ನೆಲ್ಲಾ ಚೆನ್ನಾಗಿ ಪರಿಶೀಲಿಸಿ ತೀರ್ಮಾನ ಮಾಡಿ ಅದರಂತೆ ಬರೆದುಕೊಟ್ಟು ಪ್ರಜೆಗಳಿಗೆ ಸರ್ಕಾರದ ಕಾನೂನುಗಳು ಚೆನ್ನಾಗಿ, ಸುಲಭವಾಗಿ ಅರ್ಥವಾಗುವಂತೆ ವ್ಯವಸ್ಥೆ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇಷ್ಟು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀ ಸಿ ಜೆ. ಮುಕ್ಕಣ್ಣಪ್ಪ (ಗುಬ್ಬಿ).—ಸ್ವಾಮಿ, ಈ ಹಿಂದೆ ಇಂತಹದೇ ಒಂದು ಮಸೂದೆ ಮಾನ್ಯ ರೆವಿನ್ಯೂ ಮಂತ್ರಿಗಳ ಕೈಯಿಂದ ಸೆಲೆಕ್ಟ್ ಸಮಿತಿಗೆ ಹೋಯಿತು. ಈಗಾಗಲೆ ಅದೇ ನಮೂನೆಯ ಮತ್ತೊಂದು ಬಿಲ್ಲು ವಾಸದ ಮನೆ ಮತ್ತು ಬಾಡಿಗೆಗೆ ಸಂಬಂಧಪಟ್ಟ ವಿಚಾರವಾಗಿ ಶಾಸನ ಕಡಿತಕ್ಕೇರಿಸತಕ್ಕ ಬಗ್ಗೆ ಸೆಲೆಕ್ಟ್ ಸಮಿತಿಗೆ ಕಳುಹಿಸುವ ಮನ್ನ ಈ ಸಭೆಯಲ್ಲಿ ನಿನ್ನೆಯಿಂದಲೂ ಚರ್ಚೆಯಾಗುತ್ತಿದೆ. ಮೈಸೂರು ರೆಂಟ್ ಕಂಟ್ರೋಲ್ ಬಿಲ್ಲನ್ನು ಮೊದಲನೆಯ ಸಾರಿಗೆ ಶಿರೋನಾಮೆಯನ್ನು ಓದಿದಾಗೇನೋ ಒಂದು ರೀತಿಯಾಗಿ ಮನಸ್ಸಿಗೆ ಬಹಳ ಆಪ್ಯಾಯಮಾನವಾಗಿ ಕಾಣಿಸಿತು. ಆಗ ಮನಸ್ಸಿಗೇನು ಭಾಸವಾಯಿತೆಂದರೆ ಬಾಡಿಗೆಗೆ ವಾಸಮಾಡತಕ್ಕ ಜನರಿಗೆ ಮನೆಗಳು ಸುಲಭವಾಗಿ ಸಿಕ್ಕುವ ಹಾಗೆ ಏನೋ ಒಂದು ಕಾನೂನನ್ನು ಮಾಡಿರಬೇಕೆಂಬುದಾಗಿ ಭಾಸವಾಯಿತು. ಅದರಿಂದ ಮನಸ್ಸಿಗೆ ಬಹಳ ಸಂತೋಷವಾಯಿತು. ಆದರೆ ನಾನು ಈ ಬಿಲ್ಲಿನಲ್ಲಿರತಕ್ಕ ಹಾಳೆಗಳನ್ನು ತಿರುವಿ ಹಾಕುತ್ತಾ ಹೋದಾಗ ಒಳಗಡೆ ಅಡಗಿರತಕ್ಕ ವಿಚಾರವನ್ನು ನೋಡಿ ನನಗೆ ಇದೊಂದು ಮರುಭೂಮಿಯ ಚಿತ್ರದಂತೆ ಕಾಣಿಸಿತು! ಆದುದರಿಂದ ಸರ್ಕಾರದವರು ಮತ್ತೊಮ್ಮೆ ಇಲ್ಲಿಯೂ ಸಹ ತಮ್ಮ ಬುದ್ಧಿ ಶೂನ್ಯತೆಯನ್ನೇ ತೋರಿಸಿದ್ದಾರೆಂದು ಹೇಳಿದರೆ ಅದರಲ್ಲೇನೂ ಆಶ್ಚರ್ಯವಿಲ್ಲ. ಈ ಹಿಂದೆ ಶ್ರೀಮಾನ್ ಮಂಜಪ್ಪನವರು ಭೂಸುಧಾರಣೆಯನ್ನು ದೇಶದಲ್ಲಿ ಜಾರಿಗೆ ತಂದು ದೇಶದಲ್ಲಿ ಎಲ್ಲಾ ಜನರಿಗೂ ಭೂಮಿಯನ್ನು ಕೊಡುತ್ತೇನೆಂದು ಹೇಳುತ್ತಿದ್ದಾಗ Lands to the tiller ಎಂದು ಹೇಳುತ್ತಾ ಯಾರಲ್ಲಿ ಜಮೀನು ಹೆಚ್ಚಾಗಿರುತ್ತದೆಯೋ ಅಂಥವರಿಂದ ಜಮೀನನ್ನು ಕಿತ್ತುಕೊಂಡು ಜಮೀನಿಲ್ಲದಿರುವವರಿಗೆ ಒಂದು ಕಸುಬನ್ನು ಹಚ್ಚುತ್ತೇನೆಂಬುದಾಗಿ ಹೇಳಿದ್ದನ್ನು ಕೇಳಿ ನನಗೆ ಬಹು ಸಂತೋಷವಾಗಿತ್ತು. ಹಾಗೆ ಮೊದಲು ಸರ್ಕಾರದವರು ಜಮೀನ್ದಾರ ಬಗ್ಗೆ ಅಂಥ ಒಂದು ಕಾಯಿದೆಯನ್ನು ತಂದಿರುವಾಗ ಅದೇ ನಮೂನೆಯ ಕಾಯಿದೆಗಳನ್ನು ಇವರು ಎಲ್ಲಾ ಸೆಕ್ಟಾರುಗಳಲ್ಲೂ ತರಬೇಕಾದ್ದು ನ್ಯಾಯವಾಗಿತ್ತು. ಈ ಹಿಂದೆ ಜಮೀನ್ದಾರರುಗಳಿಂದ ಜಮೀನು ಕಿತ್ತುಕೊಳ್ಳುವಾಗ Lands to he tiller ಎಂದು ಹೇಗೆ ಹೇಳಿದ್ದರೋ ಹಾಗೇ ಈಗ ಈ ಮನೆಗಳ ಬಗ್ಗೆ ಕಾನೂನನ್ನು ತಯಾರಿಸುವಾಗ Houses to the tenants ಎಂದು ಏಕೆ ಮಾಡಲಿಲ್ಲ? ಇಲ್ಲಿಯೂ ಸಹ ಸರ್ಕಾರದವರು ನ್ಯಾಯವಾಗಿ ಕಾನೂನನ್ನು ತರಬೇಕಾಗಿದ್ದರೆ ಯಾರಲ್ಲಿ ಹೆಚ್ಚಿನ ವಾಸದ ಮನೆಗಳಿರುತ್ತವೆಯೋ ಅಂಥವರಿಂದ ಆ ಮನೆಗಳನ್ನು ಕಿತ್ತುಕೊಂಡು ಅವರಿಗೆ ಕಾಂಪನ್ಸೇಷನ್ ಕೊಟ್ಟು ಯಾರು ಯಾರು ಯಾವ ಯಾವ ಮನೆಗಳಲ್ಲಿ ಬಾಡಿಗೆಗೆ ವಾಸ ಮಾಡುತ್ತಿದ್ದಾರೋ ಅವರವರೇ ಆ ಮನೆಗಳಿಗೆ ಮಾಲೀಕರೆಂದು ಅವರಿಗೇ ಆ ಸ್ವತ್ತುಗಳ ಸ್ವಾಮ್ಯವನ್ನು ಏಕೆ ಕೊಡಲಿಲ್ಲವೋ ನನಗೆ ಅದು ತಿಳಿಯದಾಗಿದೆ. ಈ ವಿಚಾರವನ್ನು ಶ್ರೀಮಾನ್ ಕಡಿದಾಳ್ ಮಂಜಪ್ಪನವರ ಭಾಷೆಯಲ್ಲೇ ಹೇಳುವುದಾದರೆ ಈ ಮಸೂದೆ ಕೇವಲ ಅವರೊಬ್ಬರಿಗೆ ಅಪ್ಯಾಯಮಾನವಾಗಿರುತ್ತದೆಯೇ ಹೊರತು ನನಗೇನೋ ಈ ಬಿಲ್ಲಿನ ಮೇಲೆ ಮಾತನಾಡಲಿಕ್ಕೂ ಸಹ ಇದು ಅಷ್ಟೇನೂ ಆಪ್ಯಾಯಮಾನವಾಗಿರುವುದಿಲ್ಲ. ಆದರೆ ಈಗಾಗಲೇ ಮಾತನಾಡಿದ ಕೆಲವು ಸ್ನೇಹಿತರು ಇಂಥ ಕಾನೂನುಗಳೇ ಅನಾವಶ್ಯಕ ಎಂದು ವಾದಿಸಿದ್ದಾರೆ. ಆದರೆ ನಾನು ಹಾಗೆ ಹೇಳುವುದಿಲ್ಲ. ಇಂಥ ಕಾನೂನುಗಳು ಇರಬೇಕೆನ್ನುವವರಲ್ಲಿ ನಾನೂ ಸಹ ಒಬ್ಬನಾಗಿದ್ದೇನೆ. ಈ ಸಂದರ್ಭದಲ್ಲಿ ನನಗೊಂದು ಕಥೆ ಜ್ಞಾಪಕಕ್ಕೆ ಬರುತ್ತಿದೆ. ಹಿಂದೆ ಸತಿ ಸಾವಿತ್ರಿ ತನ್ನ ಪಾತಿವ್ರತ್ಯದ ಧರ್ಮದಿಂದ ತನ್ನ ಗಂಡನ ಪ್ರಾಣವನ್ನು ಕೊಂಡೊಯ್ಯಲು ಬಂದಿದ್ದ ಯಮಧರ್ಮರಾಯನ ಕಾಲಿಗೆ ಬಿದ್ದು ತನ್ನ ಗಂಡನ ಪ್ರಾಣವನ್ನು ಉಳಿಸಿಕೊಂಡ ಹಾಗೆ ಇಲ್ಲಿ ಸರ್ಕಾರದವರೂ ಸಹ ಅದೇ ರೀತಿ ಈ ಕಾನೂನುಗಳಿಗೆ 10 ವರ್ಷ, 5 ವರ್ಷ, 3 ವರ್ಷಗಳ ಪ್ರಾಣದಾನ ಕೇಳುತಿದ್ದಾರೆ. ಇದು ಖಂಡಿತ ಸರಿಯಾದುದಲ್ಲ. ಈಗತಾನೆ ಇನ್ನೂ ಈ ಮೈಸೂರು ರೆಂಟ್ ಕಂಟ್ರೋಲ್ ಬಿಲ್ಲನ್ನು ಇಡಿಯ ಹೊಸ ಮೈಸೂರು ರಾಜ್ಯದ ಎಲ್ಲ ಭಾಗಗಳಿಗೂ ಒಂದೇ ಸಮನಾಗಿರುವಂತೆ ಒಂದು ಕಾನೂನನ್ನು ತಯಾರಿ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಸಲು ಹೊರಟಿದ್ದಾರೆ. ಹೀಗಿರುವಾಗ ಸರ್ಕಾರದವರು ಏತಕ್ಕೆ 10 ವರ್ಷದ ಜೀವದಾನ ಕೇಳಿದ್ದಾರೆ ! ಇದನ್ನು ಕೇಳಿರುವುದು ಸರ್ಕಾರದ ಬುದ್ಧಿ ಶೂನ್ಯತೆ ಅಲ್ಲದೆ ಮತ್ತೇನು ! ಇದನ್ನು ಬುದ್ಧಿ ಶೂನ್ಯತೆ ಎಂದು ಕರೆಯಲಾಗದಿದ್ದರೆ ಮತ್ತೆ ಯಾವ ಭಾಷೆಯನ್ನು ಪ್ರಯೋಗ ಮಾಡಬೇಕೋ ನನಗೆ ಗೊತ್ತಾಗುತ್ತಿಲ್ಲ. ಆದರೆ ಈಗಾಗಲೇ ಮಾತನಾಡಿರತಕ್ಕ ಶ್ರೀ ಮಾರ್ಕ್ ಜೋತಾವಲೆಯವರು ಈ ಅವಧಿ 5 ವರ್ಷಗಳಿದ್ದರೆ ಸಾಕೆಂದು ಹೇಳಿದರು. ಲ್ಯಾಂಡ್ ಸುಧಾರಣೆಗಳನ್ನು ತರಬೇಕೆಂದು ಹೇಳುತ್ತಿದ್ದಾಗ ಆ ಮಸೂದೆಯ ವಿಚಾರದಲ್ಲೂ ಹೀಗೇ ಏಕೆ ಒಂದು ಅವಧಿಯನ್ನು ಗೊತ್ತುಮಾಡಲಿಲ್ಲ ! ಈ ಮಸೂದೆಯ "ಉದ್ದೇಶ ಮತ್ತು ಕಾರಣಗಳನ್ನು" ತಿಳಿಸತಕ್ಕ ಭಾಗದಲ್ಲಿ ಈ ಕಾನೂನಿಗೆ ಜೀವಾವಧಿ ಕೇವಲ 1970ರ ತನಕ ಇರಬೇಕೆಂದು ಕೇಳಿಕೊಂಡಿದ್ದಾರೆ. ಒಂದು ಕಾನೂನನ್ನು ರಚಿಸಿದರೆ ಅದು ಕೇವಲ 10 ವರ್ಷಗಳ ಕಾಲ ಮಾತ್ರ ಜೀವಂತವಾಗಿದ್ದು ಅನಂತರ ಅದು ಸಾಯುವುದಾಗಿದ್ದರೆ ಅಂಥಾ ಕಾನೂನನ್ನು ಏಕೆ ಮಾಡಬೇಕು ? ಸಮಿಕರಣ ಮಾಡತಕ್ಕ ಈ ಮೈಸೂರು ರೆಂಟ್ ಕಂಟ್ರೋಲ್ ಅಂಡ್ ಅಕಾಮಡೇಷನ್ ಆಕ್ಟ್ ಇಡಿಯ ರಾಜ್ಯಕ್ಕೆಲ್ಲ ಒಂದಾಗುವಂತೆ ಅನ್ವಯಿಸತಕ್ಕ ಆಕ್ಟ್ ಕೇವಲ 10 ವರ್ಷ ಮಾತ್ರ ಇರಬೇಕೆಂದು ಹೇಳುವುದು ಸರಿಯೇ ? ಇದು ಸರಿಯಾದುದಲ್ಲ; ಇದರಲ್ಲಿ ತಪ್ಪಿದೆ. ಅದನ್ನು ತಿದ್ದಿಕೊಳ್ಳಬೇಕೆಂದು ಮಂತ್ರಿಗಳಿಗೆ ಹೇಳಿದರೆ ಅದನ್ನು ಅವರು ತಲೆಗೇ ಹಾಕಿಕೊಳ್ಳದೆ ಯಾರೋ ಸೆಕ್ರೆಟರಿಗಳು ಏನೋ ಒಂದು ಬರೆದು ತಮ್ಮ ಕೈಗೆ ಕೊಟ್ಟಿರತಕ್ಕದ್ದನ್ನೇ ಸರಿಯೆಂದು ಸಾಧಿಸಲು ಹೊರಟಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪ.—ಮಾನ್ಯ ಸದಸ್ಯರು ಹಳೆಯ ಮೈಸೂರಿನಲ್ಲಿದ್ದ 1957ನೆಯ ಇಸವಿಯ ರೆಂಟ್ ಕಂಟ್ರೋಲ್ ಅಂಡ್ ಅಕಾಮಡೇಷನ್ ಆಕ್ಟನ್ನು ಸರಿಯಾಗಿ ಓದಿಲ್ಲ.

ಶ್ರೀ ಸಿ. ಜೆ. ಮುಕ್ಕಣಪ್ಪ.—ಅದೇನೋ "ಒಲ್ಲದ ಗಂಡನಿಗೆ ಮೊಸರಿನಲ್ಲಿ ಕಲ್ಲುಸಿಕ್ಕಿತು" ಎನ್ನುವಂತೆ ನಾನು ಮಾತನಾಡುತ್ತಿರುವುದರಲ್ಲಿ ಏನಾದರೂ ಸತ್ಯಾಂಶವಿದೆಯೇ ಎಂಬುದನ್ನು ಕೇಳದೆ ಉದಾಸೀನ ಭಾವದಿಂದ ಇರುತ್ತಿರುವುದನ್ನು ನೋಡಿಕೊಂಡೇ ನಾವೂ ಸಹ ಅಷ್ಟೇ ಔದಾಸೀನ್ಯದಿಂದ ಮಾತನಾಡುದ್ದೇವೆ. ಮದ್ರಾಸಿನಲ್ಲೂ ಸಹ ಹೀಗೇ ಅನೇಕ ಆರ್ಡಿನೆನ್ಸುಗಳನ್ನು ಹೊರಡಿಸಿದ್ದಾರೆ. ಇದನ್ನೆಲ್ಲಾ ನೋಡಿದರೆ ಸರ್ಕಾರಕ್ಕೆ ಅಡ್ವೈಜ್ ಮಾಡತಕ್ಕ ಜನರು ಬಹಳ ಅತಿರೇಕಕ್ಕೆ ಹೋಗಿದ್ದಾರೆ. ಇದರಿಂದ ಮೈಸೂರು ದೇಶದ ಜನರಿಗೇನೂ ಸುಖವಿಲ್ಲವೆಂಬ ದೃಷ್ಟಿಯಿಂದ ನಾನು ಈ ಮಾತುಗಳನ್ನು ಹೇಳುತ್ತಿದ್ದೇನೆ. ಈ ಮಸೂದೆಯನ್ನೇನೋ ತಯಾರಿಸಿದ್ದಾರೆ. ಆದರೆ ಇದಕ್ಕೆ ಕಂಟ್ರೋಲರ್ ಯಾರ ! ಡೆಪ್ಯುಟಿ ಕಮಿಷನರೇ ಅಥವಾ ಅಸಿಸ್ಟೆಂಟ್ ಕಮೀಷನರೇ, ಯಾರು ! ಸರ್ಕಾರದವರು ತಮ್ಮ ಕೈಕೆಳಗಿರತಕ್ಕ ಅಧಿಕಾರಿಗಳಿಗೆ ಈ ಕಂಟ್ರೋಲ್ ಅಧಿಕಾರ ಕೊಟ್ಟು ತಮಗೆ ಬೇಕಾದವರಿಗೆ ಮಾತ್ರ ಅನುಕೂಲ ಮಾಡಬೇಕೆಂಬ ಉದ್ದೇಶ ಈ ಮಸೂದೆಯ ಹಿಂದೆ ಅಡಕವಾಗಿದೆ. ಈ ಕೇಸುಗಳ ಅಪೀಲನ್ನು ಡಿಸ್ಟ್ರಿಕ್ಟ್ ಕೋರ್ಟುಗಳಿಗೆ ಕೊಟ್ಟಿದ್ದಾರೆ. ಹಾಗೆ ಕೋರ್ಟಿಗೆ ಅಪಲೇಟ್ ಅಧಿಕಾರ ಕೊಟ್ಟು ಅಸಿಸ್ಟೆಂಟ್ ಕಮಿಷನರಿಗೆ ಕಂಟ್ರೋಲ್ ಅಧಿಕಾರ ಕೊಡುವುದು ಯಾವ ನ್ಯಾಯವೋ ನಾನು ಕಾಣೆ ! ಈ ಅಧಿಕಾರವನ್ನೂ ಕೂಡ ಸರ್ಕಾರದವರು ಏಕೆ ಜುಡಿಷಿಯರಿಗೆ ವಹಿಸಬಾರದು ? ಈ ಅಧಿಕಾರವನ್ನು ಸರ್ಕಾರಿ ನೌಕರರಿಗೆ ವಹಿಸುವುದರಿಂದ ಭಾರಿ ಪೆಟ್ಟು ಬೀಳುತ್ತದೆ. ಆದಕಾರಣ ಈ ಅಧಿಕಾರವನ್ನು ಜುಡಿಷಿಯರಿಗೇ ವಹಿಸಬೇಕೆಂದು ಹೇಳುತ್ತೇನೆ.

ಸ್ವಾಮಿ, ಈ ಕಾನೂನು 1957 ರಿಂದ ಈಚೆಗೆ ಮನೆಗಳನ್ನು ಯಾರು ಕಟ್ಟಿದ್ದಾರೋ ಅಂಥವರಿಗೆ ಅನ್ವಯಿಸುವುದಿಲ್ಲ ಎಂದು ಹೇಳಿದ್ದಾರೆ. 1956ಕ್ಕೆ ಈಚೆಗೆ ಯಾರು ಯಾರು ದೇಶದ ಬೊಕ್ಕಸಕ್ಕೆ ತೆರಬೇಕಾದ ಟ್ಯಾಕ್ಸನ್ನು ಕೊಡದೆ ಇವೇಡ್ ಮಾಡಿಕೊಂಡಿರುತ್ತಾರೋ ಅಂಥವರಿಗೊಂದು ರಕ್ಷಣೆಯನ್ನು ಕೊಡುವುದಕ್ಕಾಗಿ ಸರ್ಕಾರದವರೀಗ ಈ ಮಸೂದೆಯನ್ನು ತಂದಿರುವ ಹಾಗೆ ಭಾಸವಾಗುತ್ತಿದೆ. ಸರ್ಕಾರಕ್ಕೆ ಸಲ್ಲಬೇಕಾದ ಟ್ಯಾಕ್ಸನ್ನು ಸಲ್ಲಿಸದೆ ಅವರು ಹೆಚ್ಚು ಹೆಚ್ಚಾಗಿ ಮನೆ, ಮಠ, ಆಸ್ತಿಗಳನ್ನು ಮಾಡಿಕೊಂಡಿರುತ್ತಾರೆ. ಅಂಥವರುಗಳಿಗೆಲ್ಲ ಒಂದು ರಕ್ಷಣೆಯನ್ನು ಕೊಡಬೇಕೆಂಬ ಉದ್ದೇಶ ಈ ಮಸೂದೆಯ ಹಿನ್ನೆಯಲ್ಲಿ ಅಡಕವಾಗಿದೆ ಎಂದು ಹೇಳಿದರೆ ಅದೇನೂ ತಪ್ಪಾಗುವುದಿಲ್ಲ.

5 P.M.

1957ರ ಹಿಂದೆ ಕಟ್ಟಡಗಳನ್ನು ಕಟ್ಟಿದಂತಹವನು ಮಾಡಿದ ಪಾಪವೇನು ? 1957 ರಿಂದ ಈಚೆಗೆ ಕಟ್ಟಡವನ್ನು ಕಟ್ಟಿಸಿ ಮಾಡಿದ ಪುಣ್ಯವೇನು ? ಸರ್ಕಾರ ಇದನ್ನೇಕೆ ಯೋಚನೆ ಮಾಡಲಿಲ್ಲ ? 1956 ರಿಂದ ಇಡಿಯ ಹಿಂದೂಸ್ತಾನದಲ್ಲಿ ಇರುವಂತಹ Tax Evader ಗಳಿಗೆ ಏನು ಕ್ರಮ ತೆಗೆದುಕೊಂಡಿದ್ದರಿ ! ಬಡವರಿಗೆ ಉಪಕಾರ ಮಾಡಬೇಕೆನ್ನುವ ಇಚ್ಛೆ ಇದೆ ಎಂದು ಹೇಳುತ್ತ ಶ್ರೀಮಂತರ ಕಿಸೆಯನ್ನು ಯಾವ ರೀತಿಯಾಗಿಯೂ ಬಿಡಿಸಲಾರರು ಎಂದು ಹೇಳಿದರೆ ತಪ್ಪಾಗಲಾರದು. ಇವೊತ್ತಿನ ದಿವಸ ಒಂದಕ್ಕೆ, ನೂರು, ನೂರರಿಂದ ಸಾವಿರ, ಸಾವಿರದಿಂದ ಲಕ್ಷ ಹೀಗೆ ಬೆಂಗಳೂರು, ಶಿವಮೊಗ್ಗ ಮುಂತಾದ ದೊಡ್ಡ ಪಟ್ಟಣಗಳಲ್ಲಿ ದೊಡ್ಡ ದೊಡ್ಡ ಕಂಪನಿಗಳನ್ನು ಮಾಡಿಕೊಂಡು ಇರುವ ಶ್ರೀಮಂತರ ವಿಷಯದಲ್ಲಿ ಏನು ಕ್ರಮವನ್ನು ಕೈಕೊಂಡಿದ್ದಿರಿ ! ಇಂತಹವರ ಜಾತಕಗಳನ್ನು ನೋಡಬೇಕೆಂದು ನಮ್ಮ ಮುಂದೆ ಕಾನೂನನ್ನು ತರುತ್ತಿದ್ದೀರಿ. ಬಡವರಿಗೆ ಅನುಕೂಲಮಾಡಬೇಕು, ಬಡವರಿಗೆ ರಕ್ಷಣೆ ಕೊಡಬೇಕು ಎಂದು ಹೇಳುತ್ತ ಶ್ರೀಮಂತರನ್ನು ರಕ್ಷಣೆ ಮಾಡುತ್ತಿದ್ದೀರಿ. ಬಡವರಿಗೇನೋ ನೀವು ಒಳ್ಳೆಯದನ್ನು ಮಾಡುವುದಿಲ್ಲ ಬಡವರಿಗೆ ಅನುಕೂಲ ಮಾಡುತ್ತೇವೆಂದು ಈಗ ಟೆನೆನ್ಸಿಲಾ ಬೇರೆ ತರಲಾಗಿದೆ. ಆದುದರಿಂದ 1957 ರಿಂದೀಚೆಗೆ ಕಟ್ಟಡಗಳನ್ನು ಕಟ್ಟಿರುವಂತಹವರು, ಮುಂದಿನ ಮಾಹೆ ನಡೆಸುವ ಕಾಂಗ್ರೆಸ್ಸಿನ ಅಧಿವೇಶನಕ್ಕೇನಾದರೂ ಹಣಕಾಸನ್ನು ಕೊಟ್ಟಿದ್ದಾರೆಯೆ ! ಈ ರೀತಿಯಾಗಿ ತಾವು ಮಾಡಿರುವುದು ಸರಿಯಾಗಿದೆಯೇ ಎನ್ನುವುದನ್ನು ಸುದೀರ್ಘವಾಗಿ ಯೋಚನೆ ಮಾಡಬೇಕು. ಕಾಂಗ್ರೆಸ್ಸಿನವರು ಇಲ್ಲಿಯ ವರೆಗೂ ಉಪಯೋಗಿಸಿರುವ Socialistic pattern of society ಎಂಬ ಪದ ಈಗ ನಿಮ್ಮ ಡಿಕ್ಷನರಿಯಲ್ಲಿಲ್ಲವೇ ! ಇಲ್ಲಿಯ ವರೆಗೂ ಮಾತನಾಡಿದ ಎಲ್ಲ ಸ್ನೇಹಿತರೂ ಬಹುಮಟ್ಟಿಗೆ ಶ್ರೀಮಂತರ ಪರವಾಗಿ, ಪಟ್ಟಣಗಳಲ್ಲಿರುವವರ ಪರವಾಗಿ ಮಾತನಾಡಿದರೇ ವಿನಾ ಹಳ್ಳಿಗಾಡಿನ ವಿಚಾರವಾಗಿ ಒಂದು ಮಾತನ್ನೂ ಆಡಲಿಲ್ಲವಲ್ಲ? ಹೀಗಿರುವಾಗ ಭೂಸುಧಾರಣೆಯು ಹಳ್ಳಿಗಳಿಗೆ ಹೋಗಬೇಕು ಎಂದು ಹೇಳಲಾಗುತ್ತಿದೆ. ಈಗ

ತಾನೆ ಮಾತನಾಡಿದ ನನ್ನ ಮೂರು ಜನ ಮಾನ್ಯ ಸ್ನೇಹಿತರು ಮಾತನಾಡುವಾಗ Socialistic pattern of Society ಎನ್ನುವುದನ್ನು Dictionary ಯಿಂದ ತೆಗೆದುಹಾಕಿ ಬಿಟ್ಟು ಸಮತಾವಾದದಂತೆ ಮಾಡಿದರೆ? ಸಮಾಜ ಸಮತಾವಾದದ ಮೇಲೆ ನೀವು ಸಮುದ್ರ ದಾಟುವುದಕ್ಕೆ ಆಂಜನೇಯ ಲಂಕೆಗೆ ಹೋಗುವಾಗ ದಾಟಿದಂತೆ ಹೋಗುತ್ತೀರಿ. ಹೀಗೆ ಈ ಕಾನೂನಿಂದ ನಿಮ್ಮ ಜಾತಕಫಲವನ್ನೇಕೆ ನೋಡಿ ಎಂದು ಹೇಳುತ್ತೀರಿ? ಏನು ಧರ್ಮ ಪ್ರಭುಗಳು ನೀವು! ಹಾ ಪರಮಾತ್ಮಾ! ನಿಮ್ಮನ್ನೆಲ್ಲ ಸ್ವರ್ಗದ ಬಾಗಿಲನಲ್ಲೇ ನಿಲ್ಲಿಸಬೇಕು.

ಶ್ರೀ ಕಡಿದಾಳ್ ಮಂಜಪ್ಪ.—ಪರಮಾತ್ಮ ನಿಮಗೆ ಹೀಗೆ ಮಾತನಾಡಲು ಏನು ಬಾಯಿ ಕೊಟ್ಟನೋ? (ನಗು).

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇನ್ನೊಂದು ವಿಚಾರ ಇದರಲ್ಲಿದೆ: 15 ರೂಪಾಯಿಗಳಷ್ಟು ಬಾಡಿಗೆ ಬರುವ ಕಟ್ಟಡಗಳನ್ನು Rent Controller ಗೆ ತಿಳಿಸಬೇಕಾಗಿಲ್ಲ. 25, 50, 70, 100 ರೂಪಾಯಿಗಳಷ್ಟು ಬಾಡಿಗೆ ಬರುವುದನ್ನು ಮಾತ್ರ Rent Controller ಗೆ ತಿಳಿಸಿ ಅದನ್ನು ಮಾತ್ರ ಕೊಡುತ್ತಾರೆಂದಿದೆ. 15 ರೂಪಾಯಿಗಳ ಬಾಡಿಗೆ ಮನೆ ಸಿಕ್ಕಿದರೆ ಹೇಗೋ ಮಳೆ ಬಿಸಿಲಿಗೆ ಮರೆಯಾಗಿರೋಣವೆಂದಿರುವ ಬಡವನಿಗೆ He nead not report the vacancy to the Rent Controller ಎಂದು ಇಲ್ಲಿ ಹೇಳಲಾಗಿದೆ.

ಪಟ್ಟಣಗಳಲ್ಲಿರುವವರು ಸುಖವಾಗಿರಬೇಕು. ಹಳ್ಳಿಗಳಲ್ಲಿರುವ ಜನ ವನವಾಸ ಪಡಬೇಕು. ಪಟ್ಟಣದಲ್ಲಿರುವವರು ಮಾತ್ರ ಇಂದ್ರಭವನ, ಚಂದ್ರಭವನ ಮುಂತಾದ ಹೋಟೆಲುಗಳಿಗೆ ಹೋಗಿ ಇಡ್ಲಿ ಮತ್ತು ಚಟ್ನಿ ಮುಂತಾದುದನ್ನು ತೆಗೆದುಕೊಂಡು ತಿನ್ನುತ್ತಾ ಕಾಲ ಹಾಕಬೇಕು. ಇವೊತ್ತಿನ ದಿವಸ 50 ರೂಪಾಯಿಗಳಷ್ಟು ಮಾಹೆಯಾನ ಸಂಬಳಬರುವ ಬಡ ನೌಕರರಿಗೆ ಎಂಟಾಣೆಯಷ್ಟು ಹೆಚ್ಚು ಮಾಡಬೇಕೆಂದರೆ ಮಾನ್ಯ ಮುಖ್ಯ ಮಂತ್ರಿಗಳಾದ ಜತ್ತಿಯವರು Finance Memorandum ತೋರಿಸಿ It is not possible ಎಂದು ಒಂದ ಕಡೆ ಹೇಳುತ್ತಾರೆ. ಮತ್ತೊಂದು ಕಡೆ ಹಣಕಾಸಿನ ಸಚಿವರು ಮೂರು ರೂಪಾಯಿಗಳಷ್ಟು ಬಾಡಿಗೆಯನ್ನು ಕೊಡಲು ಸಾಧ್ಯವಿಲ್ಲ ಎನ್ನುತ್ತಾರೆ. ನಮ್ಮ ಈ ಅಸೆಂಬ್ಲಿಯ ಬಾಗಿಲ ನಲ್ಲಿ ನಿಂತಿರುವ ಪಂಚರಂಗಿ ಟೋಪಿ ಧರಿಸಿರುವ ಬಡ ನೌಕರರಿಗೆ (peons) ನಲವತ್ತೈದು ರೂಪಾಯಿಗಳಷ್ಟು ಸಂಬಳ ಬರುತ್ತಿದೆ. ಅಂತಹವರಿಗಾಗಿ 15 ರೂಪಾಯಿಗಳು ಮತ್ತು ಅದಕ್ಕಿಂತ ಕಡಮೆ ಬಾಡಿಗೆ ಬರುವ ಮನೆಗಳು ಸಿಕ್ಕಿದರೆ ಬಾಡಿಗೆ ಕೊಡಬಹುದು. ಈ ರೀತಿ ಮಾಡಿದರೆ ಬಡವರಿಗೆ ಮನೆ ಸಿಕ್ಕುತ್ತದೆ. ಇಲ್ಲಿ ಹೇಳಿದ ಹಾಗೆ 15 ರೂಪಾಯಿಗಳ ಮನೆಗಳು ಖಾಲಿಯಾಗಿರುವ ವಿಚಾರವನ್ನು ತಿಳಿಸದೆ ಹೋದರೆ, ಇಂತಹವರೆಲ್ಲ ಊರಿನ ಹೊರಗಡೆ ಇರಬೇಕು ಮತ್ತು ಹೀಗಿರುವ ಮನೆಗಳನ್ನು ತಮಗೆ ಬೇಕಾದವರಿಗೇ ಕೊಟ್ಟು ಬಿಡಬೇಕಾಗುತ್ತದೆ. ಹೀಗೆ ಇಂತಹ ಜನಗಳು ಊರಿನ ಹೊರಗಿಂದ ಬರುವುದರಿಂದ ನಾಳೆ ಮಂತ್ರಿಗಳು ತಮ್ಮ ರೂಮಿನ ಒಳಗಿನಿಂದ ಗಂಟೆ ಹೊಡೆದರೆ ಹೊರಗಡೆ ಬಾಗಿಲಲ್ಲಿ ಕೆಲಸ ಮಾಡುವವರೇ ಇಲ್ಲದೇ ಅವರೇ ಬಾಗಿಲಿಗೆ ಬರಬೇಕಾದ ಪರಿಸ್ಥಿತಿ ಒದಗುತ್ತದೆ. ಅದಕ್ಕೋಸ್ಕರವಾಗಿ ಈ 15 ರೂಪಾಯಿಗಳ ಮನೆಗಳ Vacancy ಗಳನ್ನೂ Rent Controller ಗೆ ರಿಪೋರ್ಟು ಮಾಡಬೇಕು. ಇದನ್ನು ಸೆಲೆಕ್ಟ್ ಕಮಿಟಿಯವರು ಮತ್ತು ಸರಕಾರದವರು ದೀರ್ಘವಾಗಿ ಯೋಚನೆಮಾಡಬೇಕು ಎಂದು ನಾನು ಅವರಲ್ಲಿ ಹೇಳುತ್ತೇನೆ.

ಸ್ವಾಮಿ, ಈ ಕಂಟ್ರೋಲರಿಗೇನೆ ಅಧಿಕಾರವನ್ನು ಕೊಟ್ಟಿದ್ದೀರಿ. ಜುಡಿಷಿಯಲ್ ಆಫೀಸರಾಗಿರುವವರು ಇದ್ದು ಬಿಟ್ಟರೇನೆ ಅವರಿಗೇನೂ ಕಾನೂನಿನಲ್ಲಿ ಅಡ್ಡಿ ಬರುವುದಿಲ್ಲ. ಈಗಿರುವಂತೆ ಸಬ್-ಡಿವಿಜನ್ನು ಆಫೀಸರು ಬರಬಹುದು, ಅವರು ಸರ್ಪ್ಲಸ್ಸು ಮನೆಗಳನ್ನು ಯಾರಿಂದ ಪಡೆಯುತ್ತಾರೆ; ಅಂತಹ ಮನೆಗಳನ್ನು ಹಂಚುವಾಗ ಅವರಿಗೇನೇ Discretion ಕೊಟ್ಟಿದ್ದೀರಿ, ರೆಂಟು ಕಂಟ್ರೋಲರಾಗಿ ಇವರು ಶ್ರೀಮಾನ್ ಜತ್ತಿಯವರು ಹೇಳಿದವರಿಗೆ, ಶ್ರೀ ಮಂಜಪ್ಪನವರು ಹೇಳಿದವರಿಗೆ ಎಂದು ಮನೆ ಕೊಡಬೇಕಾಗುತ್ತದೆ. ಈಗ ಮನೆಗಳಿಲ್ಲದೆ ಹಜಾರ, ವರಾಂಡಗಳಲ್ಲಿರುವ ಎಷ್ಟೋ ಬಡ ಜನರಿಗೆ ಈ ರೆಂಟ್ ಕಂಟ್ರೋಲರಿಂದ ಮನೆಗಳನ್ನು ಹಂಚಬೇಕು. Eviction ಎಲ್ಲೆಲ್ಲಿ ಯಾವ ಯಾವ ಸ್ಥಳಗಳಲ್ಲಾಗಿದೆ ಎನ್ನುವುದನ್ನು ತಿಳಿದು ಮನೆಗಳನ್ನು ಹಂಚುವಾಗ undue influenceಗೆ ಒಳಗಾಗಬಾರದು. ಈ ಸೆಕ್ಷನ್ನು V ನಲ್ಲಿ ಹೇಳಿರುವುದನ್ನು ಸುಧಾರಿಸಬೇಕೆಂದು ನಾನು ತಮ್ಮಲ್ಲಿ, ಸರಕಾರದಲ್ಲಿ ಮತ್ತು ಸೆಲೆಕ್ಟು ಕಮಿಟಿಯಲ್ಲಿರುವವರಿಗೂ ಹೇಳುತ್ತೇನೆ.

ಇನ್ನು ಮನೆಯನ್ನು ಯಾವ purposesಗೆ ಬೇಕಾದರೂ ತೆಗೆದುಕೊಳ್ಳಬಹುದು. ಟೆನೆಂಟ್ ಆಗಬಹುದು ಬೇಕಾದರೆ ಹೋಟೆಲ್ಲು ನಡೆಸಬಹುದು, ಬೇಕಾದರೆ ನಿಮ್ಮ ಆಫೀಸುಮಾಡಬಹುದು. ಆದರೆ ಇನ್ನೊಬ್ಬರು ಆ ರೀತಿ ತೆಗೆದುಕೊಂಡು ಬಿಟ್ಟರೆ ಆಗ ಅದು Nuisance ಆಗುತ್ತದೆಂದು ಅವರೇನು ಬೇಕಾದರೂ ಮಾಡಲು ಸಾಧ್ಯವಿಲ್ಲ. ಇದಕ್ಕವಕಾಶವಿರುವಂತಹ ಕಾನೂನಿನಿಂದ ನ್ಯಾಯ ದೊರಕಲು ಸಾಧ್ಯವೇ! ಇದೇ ಕಾನೂನು ಒಬ್ಬರಿಗೆ ನ್ಯಾಯವಾಗುತ್ತದೆ, ಇನ್ನೊಬ್ಬರಿಗೆ ಅನ್ಯಾಯವಾಗುತ್ತದೆ.

ಅದನ್ನು ಬಿಟ್ಟು ನಿಮಗೆ ಬೇರೆ, ನಮಗೆ ಬೇರೆ. ಇದು ಸರ್ಕಾರದ ದೃಷ್ಟಿ. Equal opportunities for all ಎಂದು ರಾಜ್ಯಾಂಗದಲ್ಲಿ ಹೇಳಿರುವಂತೆ ಎಲ್ಲರನ್ನೂ ಒಂದೇ ದೃಷ್ಟಿಯಿಂದ, ಒಂದೇ ತೂಕದಿಂದ ನೋಡುತ್ತವೆಂದು ಹೇಳುವವರು ನಿಜವಾಗಿಯೂ ಆ ರೀತಿ ನೋಡುತ್ತಿಲ್ಲ. ಬೇರೆಯವರು ಟೆನೆಂಟ್ ಆಗಿದ್ದು ಕಟ್ಟಡವನ್ನು ತಾನು ಪಡೆದುಕೊಂಡ ಉದ್ದೇಶಕ್ಕಲ್ಲದೆ ಬೇರೆ ಕೆಲಸ ಕಾರ್ಯಗಳಿಗೆ ಉಪಯೋಗಿಸಿಕೊಂಡರೆ ಅವರು ತೊಂದರೆಗೆ ಒಳಗಾಗುತ್ತಾರೆ. ಅದೇ ಸರ್ಕಾರದವರು ತಮಗೆ ಇಷ್ಟ ಬಂದಂತೆ ಉಪಯೋಗಿಸಿಕೊಳ್ಳುವುದಕ್ಕೆ ಅವಕಾಶವಿದೆ. ಸಾಮಾನ್ಯ ಮನುಷ್ಯನಿಗೂ ಅದೇ ಅಧಿಕಾರವಿರಬೇಕು. ಅದರಿಂದ ಇದರಲ್ಲಿರುವ ತಪ್ಪುಗಳನ್ನು ತಿದ್ದುವುದರಲ್ಲಿ ಸೆಲೆಕ್ಟ್ ಕಮಿಟಿಯವರು ಸಫಲರಾಗುತ್ತಾರೆಂದು ತಿಳಿದುಕೊಂಡಿದ್ದೇನೆ.

ಇದರಲ್ಲಿ ಲ್ಯಾಂಡ್‌ಲಾರ್ಡಿಗೆ ಎಷ್ಟೋ protection ಕೊಟ್ಟಿದ್ದೀರಿ. ನೀವೂ ಒಬ್ಬ ಲ್ಯಾಂಡ್‌ಲಾರ್ಡ್. ಕುಮಾರ ಪಾರ್ಕಿನಲ್ಲಿ ಕಟ್ಟಿದಂಥ ಮನೆಗಳನ್ನು ನಿಮ್ಮ ಅಧಿಕಾರಿಗಳಿಗೆ ಕೊಟ್ಟು ಅವರಿಗೆ ಬರುವ ಸಂಬಳದಲ್ಲಿ ಸೇಕಡ ಹತ್ತು ಭಾಗಕೊಡಬೇಕು ಎಂದು ಹೇಳುತ್ತೀರಿ. ಆದರೆ ಖಾಸಗಿ ಮಾಲೀಕನಿಗೆ ಮಾತ್ರ ಬೇರೆ ರೀತಿ. ಅವನಿಗೆ ಎಷ್ಟುಬೇಕಾದರೂ fair rent ಗೊತ್ತು ಮಾಡಬಹುದು. ಇದನ್ನು ಸ್ವಲ್ಪ ಯೋಚನೆ ಮಾಡಬೇಕು. ತುಮಕೂರಿನಲ್ಲಿ ಒಂದು ದೊಡ್ಡ ಬಂಗಲೆ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಇದೆ. ಅದರಲ್ಲಿ ಡೆಪ್ಯುಟಿ ಕಮಿಷನರಿದ್ದಾರೆ. ಅವರು ಬಾಡಿಗೆ ಕೊಡುವುದು ನೇಕಡ ಹತ್ತರಂತೆ. ಅವರು ಒಂದು ಕಡೆ ವಾಸಮಾಡುತ್ತಾರೆ. ಮಿಕ್ಕ ಕಡೆಗಳಲ್ಲಿ ಸೈಕಾರ್ಗಗಳು ಕಾಣಿಯುತ್ತಿರುತ್ತವೆ. ಇವರಲ್ಲಿ ಮೂರು ಗ್ಯಾರೇಜ್‌ಗಳಿವೆ; ದೊಡ್ಡ ಉದ್ಯಾನವನ, lawn ಎಲ್ಲ ಇವೆ. ಬಡವನಿಗೆ rent control ಬರುತ್ತದೆ. fair rent ಗೊತ್ತು ಮಾಡಬೇಕು, ಹೋಟಲನವರಿಗೆ fair rent ನಿಗದಿ ಮಾಡಬೇಕು, ನಿಮ್ಮ ಅಧಿಕಾರಿಗಳಿಗೆ ಮಾತ್ರ ಬೇಡ. ಆಯಾ ಕಟ್ಟಡಗಳ ಮೇಲೆ ಎಷ್ಟು ಹಣ ವಿನಿಯೋಗವಾಗಿದೆಯೋ ಅದನ್ನು ಗಮನಕ್ಕೆ ತಗೆದುಕೊಂಡು, ಆಯಾ ಸ್ಥಳಕ್ಕೆ ಅನುಗುಣವಾಗಿ ನಿಗದಿ ಮಾಡಬೇಕು. ಹಾಗಿಲ್ಲದೆ ಒಂದು ಕಣ್ಣಿಗೆ ಬೆಣ್ಣೆ ಒಂದು ಕಣ್ಣಿಗೆ ಸುಣ್ಣ ಹಾಕುವುದು ಸರ್ವಥಾ ಸರಿಯಲ್ಲ. ಸೆಲೆಕ್ಟ್ ಕಮಿಟಿಯವರು ಇದನ್ನು ವಿಮರ್ಶೆ ಮಾಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಈ ಸರ್ಕಾರ ನಾವು ಎಷ್ಟು ಉದಾರವಾಗಿದ್ದೇವೆ, ಇಷ್ಟೆಲ್ಲ ಜನಗಳಿಗೆ ಉಪಕಾರವಾಗಲಿ ಎಂದು ಮಾಡುತ್ತಿದರೆ ಇವರ ಟೀಕೆಗಳಿಗೆ ಮಿತಿಯೇ ಇಲ್ಲ ಎಂದು ಹೇಳಬಹುದು. ಇಂಥಕಾನೂನುಗಳನ್ನು ತಂದರೆ ದೇಶದ ಜನ ನಗುತ್ತಾರೆನ್ನುವುದು ಇವರಿಗೆ ಅರ್ಥವಾಗಲಿಲ್ಲವೇ? ಕ್ಲಾಜ್ 15ರಲ್ಲಿ lawful increase of or addition to or reduction in fair rent in what cases admissible ಎನ್ನುವ ವಿಷಯವನ್ನು ಸೇರಿಸಿದ್ದಾರೆ. ಮನೆಯ ಮಾಲೀಕನು ಮನೆಗೆ ಸುಣ್ಣ, ಬಣ್ಣ ಬಳಿಸುವಾಗ ಒಂದು ಪೋರ್ಟಿಕೋ ಹಾಕುತ್ತಾನೆ ಎಂದು ಭಾವಿಸಿದರೆ, ಆಗ ಮಾಲೀಕನು ಜಾಸ್ತಿ ಬಾಡಿಗೆಯನ್ನು ಕೇಳಬಹುದು. ಒಂದು ಬೈಸಿಕಲ್ ನಿಲ್ಲಿಸುವುದಕ್ಕೆ ಸ್ಥಳವಿಲ್ಲದೇ ಹೋದರೂ ಪೋರ್ಟಿಕೋ ಹಾಕಿದರೆ ಬಾಡಿಗೆ ಹೆಚ್ಚುಮಾಡಬಹು. ಹಿಂದೆ ಇದ್ದವನು ಮನೆ ಬಿಟ್ಟು ಬೇರೆ ಊರಿಗೆ ಹೋದರೆ, ಕಟ್ಟಡದಲ್ಲಿ ಏನಾದರೂ improvements ಮಾಡಿದರೆ ಬಾಡಿಗೆ ಜಾಸ್ತಿ ಮಾಡಬಹುದು ಎಂದು ಇದೆ. ಇದು ಯಾವ ನ್ಯಾಯ? ಮನೆಯ ಮುಂದೆ expanded metal ಹಾಕಿದರೆ, ಏನಾದರೂ ಪ್ರೊಜೆಕ್ಷನ್ಸ್ ಹಾಕಿದರೆ, ಕಳ್ಳಕಾಕರ ತೊಂದರೆಯನ್ನು ತಪ್ಪಿಸಲು ಕಿಟಕಿಗಳಿಗೆ expanded metal ಹಾಕಿದರೆ, for some improvement or addition, increase of rent is admissible ಎನ್ನುವುದು ಅರ್ಥವಾಗುವುದಿಲ್ಲ. ಇದರಿಂದ ನನಗೆ ಏನು ಅನ್ನಿಸುತ್ತವೆಂದರೆ it is detrimental to the interests of the rural people and you are pocketed by the people who are living in cities and towns. ಬಡವರ ಹೆಸರನ್ನು ಹೇಳಿಕೊಂಡು, ಅವರನ್ನೇ ನುಲಿಗೆ ಮಾಡಿ ಶ್ರೀಮಂತರ ಕಡೆ ಇದ್ದಾರೆಂದನ್ನಿಸುತ್ತದೆ. ಬಡವನನ್ನು ಉದ್ಧಾರ ಮಾಡುತ್ತೇವೆಂದು ಹೇಳುತ್ತ ಶ್ರೀಮಂತರಿಗೆ ಸಹಾಯವಾಗುವಂಥ ಕಾನೂನುಗಳನ್ನು ಮಾಡುತ್ತಿದ್ದಾರೆ "ಅಕ್ಕಿಯ ಮೇಲೆ ಆಸೆ ನೆಂಟರ ಮೇಲೆ ಇಷ್ಟ" ಎಂದು ಹೇಳುವಂತೆ ಶ್ರೀಮಂತರಿ ಬೇಕೆಂದು ಹೇಳುತ್ತೀರಿ, ಶ್ರೀಮಂತರಿರಬೇಕೆಂದರೆ ಹಳ್ಳಿಯವನು ಎಲ್ಲಿರಬೇಕು? ಬಡವರ ವಿಷಯದಲ್ಲಿ ಸುಮ್ಮನೆ lip sympathy ಏಕೆ ತೋರಿಸುತ್ತೀರೋ ಗೊತ್ತಾಗುವುದಿಲ್ಲ, ನಾನು ತಿಳಿದುಕೊಂಡಿರುವ ಹಾಗೆ ಈ ಕಾನೂನಿನಿಂದ ಬಡವರಿಗೆ ಒಳ್ಳೆಯದಾಗುವುದಿಲ್ಲ. ಪುಣ್ಯವಂತನಿಗೆ, ಸರ್ಕಾರದಲ್ಲಿ pull ಇರುವವನಿಗೆ ಒಳ್ಳೆಯದಾಗುತ್ತದೆ.

ಈ ಬಿಲ್ಲಿನಲ್ಲಿ ಕೊಟ್ಟಿರುವ ಷೆಡ್ಯೂಲನ್ನು ನೋಡಿದರೆ ಅದರಲ್ಲಿ ಈಗ Rent Control Act ಎಲ್ಲೆಲ್ಲಿ ಜಾರಿಯಲ್ಲಿದೆಯೋ ಅದರ ಪೈಕಿ ಒಂದೆರಡು ಸ್ಥಳಗಳನ್ನು ನನಗೆ ಗೊತ್ತಿರುವ ಹಾಗೆ ಬಿಟ್ಟಿದ್ದಾರೆ. ನಾನು ವಾಸವಾಗಿರುವ ಕಡೆ ಎಂದರೆ ಸಿರಾದಲ್ಲಿ ರೆಂಟ್ ಕಂಟ್ರೋಲ್ ಕಾನೂನು ಜಾರಿಯಲ್ಲಿದೆ. ತಹಸೀಲ್ದಾರರು ಅಲ್ಲಿ ರೆಂಟ್ ಕಂಟ್ರೋಲರ್. ಈ ಊರನ್ನು ಏಕೆ ಬಿಟ್ಟಿದ್ದಾರೆಯೋ ಗೊತ್ತಿಲ್ಲ. ತಿಂಗಳಿಗೆ 15-20 ರೂಪಾಯಿ ಬಾಡಿಗೆ ಇದ್ದ ಮನೆಗೆ ಬೆಳಗಾಗುವುದರೊಳಗಾಗಿ 30 ರೂಪಾಯಿ ಆಗುತ್ತದೆ. ಉದಾಹರಣೆಗೆ ನಮ್ಮ ಮಾವನವರೇ ಈ ತಿಂಗಳು 25 ರೂಪಾಯಿ ಬಾಡಿಗೆಯನ್ನು ತೆಗದುಕೊಂಡ ಮನೆಗೆ ಮುಂದಿನ ತಿಂಗಳು 35 ರೂಪಾಯಿ ತೆಗೆದುಕೊಳ್ಳುತ್ತಾರೆ. ಹೈಸ್ಕೂಲು ಟೀಚರ್, ವಿಲೇಜ್ ಲೆವಲ್‌ವರ್ಕರ್, ಬಿ. ಡಿ. ಒ. ಇವರುಗಳೆಲ್ಲ ಹೀಗೆ ಹೆಚ್ಚು ಬಾಡಿಗೆ ಕೊಡುತ್ತಿದ್ದಾರೆ. ಸಿರಾ ಟೌನಿಗೆ ಏಕೆ ಈ ಕಾನೂನನ್ನು ಅನ್ವಯಿಸಿಲ್ಲವೆಂದು ಕೇಳುತ್ತೇನೆ. ಈ ಕಾನೂನನ್ನು ಅನ್ವಯಿಸುವುದಕ್ಕೆ ಇಷ್ಟೇ ಜನ ಸಂಖ್ಯೆ ಇರಬೇಕು ಎನ್ನುವ ನಿರ್ಬಂಧವೇಕೆ? ತುಮಕೂರು ಜಿಲ್ಲೆಯ ಮಧುಗಿರಿ, ಸಿರಾ, ಪಾವಗಡ ಮುಂತಾದ ಕಡೆ ಮನೆಗಳಿಗೆ ಎಷ್ಟೋ ಅಭಾವವಿದೆ. ಆದುದರಿಂದ why do you limit it on population basis? ಎಲ್ಲ ಊರುಗಳಿಗೂ ಈ ಕಾನೂನನ್ನು ಅನ್ವಯಿಸಬೇಕು. ಹಣ ಸಂಪಾದನೆ ಮಾಡಬೇಕೆಂಬ ಧನ ಪಿಶಾಚಿ ಹಿಡಿದವರಿಂದ ಈ ರೀತಿ ಬಾಡಿಗೆ ದರಗಳು ಜಾಸ್ತಿಯಾಗುತ್ತಿವೆ. ಬೆಂಗಳೂರಿನಲ್ಲಿ ಚಿಕ್ಕಪೇಟೆಗೆ ಹೋಗಿ ಬಂದರೆ ಒಂದು ಅಂಗಡಿಗೆ 25 ಸಾವಿರ ರೂಪಾಯಿ ಪಗಡಿ ಕೇಳುವುದೂ, ಮಹಡಿಯ ಮೇಲೆ ಲಾಯರ್ ಆಫೀಸಿಗೆ ಮೂರು ಸಾವಿರ ರೂಪಾಯಿ ಪಗಡಿ ಕೇಳುವುದೂ ತಿಳಿಯುತ್ತದೆ. ಇಂಥ ಕಂಟ್ರೋಲ್ ಇರಬೇಕು ಎಂದರೆ ಜನಗಳಿಗೆ ಎಷ್ಟು ದೂರ ಸಹಾಯ ಮಾಡುತ್ತೀರೆಂಬುದನ್ನು ಯೋಚನೆಮಾಡಬೇಕು. ಪಗಡಿ ಕೊಡುವ ಪದ್ಧತಿಯು ಬೊಂಬಾಯಿನಲ್ಲಿದೆ ಎಂದು ಕೇಳಿದ್ದೆವು. ಈಗ ಬೆಂಗಳೂರು ನಗರಕ್ಕೂ ಬಂದಿದೆ. ಚಿಕ್ಕ ಪೇಟೆಯಲ್ಲಿ ತಾತಾ ಟೆಕ್ಸ್‌ಟೈಲ್ಸ್‌ನವರು ಒಂದು ಷೋರೂಂ ತೆರೆದಿದ್ದಾರೆ. ಅವರು ಮೂರು ಲಕ್ಷ ರೂಪಾಯಿಗಳ ಪಗಡಿ ಕೊಟ್ಟು ತಿಂಗಳಿಗೆ ಒಂದು ಸಾವಿರ ರೂಪಾಯಿ ಬಾಡಿಗೆ ಕೊಡುತ್ತಿದ್ದಾರೆ. ರೆಂಟ್ ಕಂಟ್ರೋಲ್ ಇರಬೇಕು. ಇದರಿಂದ ಎಷ್ಟು ದೂರ ಜನಗಳ ಹಿತ ಸಾಧನೆಯನ್ನು ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರೆಂದರೆ, ಮತ್ತೆ ಶ್ರೀಮಂತರಿಗೇ ಸಹಾಯ ಮಾಡುತ್ತೀರಿ ಎಂದು ಧಾರಾಳವಾಗಿ ಹೇಳಬಹುದು.

ಶ್ರೀ ಕೆ. ಸಿ. ರೆಡ್ಡಿಯವರು ಮೊನ್ನೆ ಪ್ರೆಸ್ ಸ್ಟೇಟ್‌ಮೆಂಟ್ ಕೊಟ್ಟು ಹೇಳಿದರು; ಹೌಸಿಂಗ್ ಫೆಸಿಲಿಟಿಗೋಸ್ಕರ ಮೈಸೂರು ಸಂಸ್ಥಾನಕ್ಕೆ ಕೊಟ್ಟ ಹಣ ಲ್ಯಾಪ್ಸ್ ಮಾಡಿದ್ದಾರೆಂದು. ಬೆಳಗ್ಗೆ ಎದ್ದರೆ ಎಷ್ಟೋ ಕಮಿಟಿಗಳನ್ನು ಅಪಾಯಿಂಟ್ ಮಾಡುತ್ತೀರಿ. ಆದರೆ ಅಡ್ವೈಜ್ ಮಾಡತಕ್ಕ ಪರ್ಮನೆಂಟ್ ಎಗ್ಜಿಕ್ಯುಟೀವ್‌ನ್ನು ಸ್ವಲ್ಪ ಪಿಪ್ ಅಪ್ ಮಾಡುವುದಕ್ಕೆ ಬರುವುದಿಲ್ಲವೇ? ಕೇಂದ್ರ ಸರ್ಕಾರದವರು ಹೌಸಿಂಗ್ ಫೆಸಿಲಿಟಿಗೋಸ್ಕರ ಕೊಟ್ಟ ಹಣವನ್ನು ಇವೊತ್ತಿನ ದಿವಸ ಕಳೆದು ಬಿಟ್ಟಿದೀರಿ. ಜನಗಳಿಗೆ ಮನೆ ಬೇಕೆಂದು ಒದ್ದಾಡುತ್ತಿದ್ದಾರೆ ನೀವು ಮನೆಗಳನ್ನು ಕಟ್ಟಿದ್ದೀರಾ?

[Mr. Speaker in the Chair]

ಭಾಷಣ ಮಾಡುವಾಗ ಕೇಂದ್ರ ಸರ್ಕಾರದವರು ಎಷ್ಟು ಹಣ ಕೊಟ್ಟಿದ್ದಾರೆ, ಎಷ್ಟು ಮನೆ ಕಟ್ಟಿದ್ದೇವೆ ಎಂದು ಹೇಳುತ್ತೀರಿ. ಎಷ್ಟರ ಮಟ್ಟಿಗೆ ನಿಮ್ಮ ಕೈಯಲ್ಲಿರುವ ಅಧಿಕಾರವನ್ನು ದುರುಪಯೋಗ ಮಾಡಿದ್ದೀರಿ ಎಂದು ನೋಡಿದರೆ ಗೊತ್ತಾಗುತ್ತದೆ. ಅಠಾರಾ ಕಛೇರಿಯಲ್ಲಿ ಸೆಕ್ರೆಟರಿ, ಅಂಡರ್ ಸೆಕ್ರೆಟರಿಯವರಿಗೆ ಯಾವ ಮನೆ ಬಾಡಿಗೆ ಕೊಟ್ಟಿದ್ದೀರೋ ಆ ಮನೆಗಳನ್ನು ಅವರಿಗೆ ಖರೀದಿಗೆ ಕೊಟ್ಟಿದ್ದೀರಿ, ಅಂಡರ್ ಸೆಕ್ರೆಟರಿ, ತುಮಕೂರಿಗೋ, ಕೋಲಾರಕ್ಕೋ, ಟ್ರಾನ್ಸ್‌ಫರ್ ಆದರೆ ಇಲ್ಲಿಗೆ ಇನ್ನೊಬ್ಬ ಸೆಕ್ರೆಟರಿ ಬಂದು ವಾಸ ಮಾಡಲು ಮನೆ ಹುಡುಕುವುದಕ್ಕೆ ಎಷ್ಟು ತೊಂದರೆ ಇದೆ. !

ಅಧ್ಯಕ್ಷರು.—ಈ ಬಿಲ್ಲಿನ ಮೇಲೆ ಚರ್ಚೆ 6 ಗಂಟೆಗೆ ಮುಗಿಯಬೇಕಾಗಿದೆ. ತಾವು ಇನ್ನೂ ಮಾತನಾಡುತ್ತಿದ್ದೀರಿ, ಮಂತ್ರಿಗಳಿಗೆ ಉತ್ತರ ಕೊಡಲು ಸ್ವಲ್ಪ ಕಾಲ ಬೇಕಾಗುತ್ತದೆ. ಆದುದರಿಂದ ತಾವು ಬೇಗನೆ ತಮ್ಮ ಭಾಷಣವನ್ನು ಮುಗಿಸಬೇಕಾಗುತ್ತದೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಯಾರಿಗೆ ಮನೆ ಕಟ್ಟಿದ್ದೀರೋ ಅವರು ಮನೆಗಳನ್ನು ಬಾಡಿಗೆಗೆ ಕೊಟ್ಟು ಹೊರಗಡೆ ಹೋಗಿದ್ದಾರೆ. ಮೈಸೂರು ದೇಶ ವಿಶಾಲ ಆದ ಮೇಲೆ ಬಂದಂಥ ಸೆಕ್ರೆಟರಿ, ಅಂಡರ್ ಸೆಕ್ರೆಟರಿ, ಫಸ್ಟ್ ಡಿವಿಜನ್ ಕ್ಲರ್ಕ್ಸ್ ಸೆಕೆಂಡ್ ಡಿವಿಜನ್ ಕ್ಲರ್ಕ್ಸ್ ಮನೆಗಳಿಲ್ಲದೆ ಎಷ್ಟು ಕಷ್ಟ ಪಡುತ್ತಿದ್ದಾರೆ ? ನೀವು ಕಟ್ಟಿದ ಮನೆಗಳು ಇದ್ದಿದ್ದರೆ, ಅವರಿಗೆ ಕೊಡುವುದಕ್ಕೆ ಬರುತ್ತಿರಲಿಲ್ಲವೇ ? ಇದನ್ನು ಸರ್ಕಾರ ಏಕೆ ಆಲೋಚನೆ ಮಾಡಲಿಲ್ಲ ? ಇದರಲ್ಲಿ ಇನ್ನೂ ಅನೇಕ ಲೋಪದೋಷಗಳು ಇವೆ. ನಾನು ಮಾತನಾಡುವುದಕ್ಕೆ ನಿಂತುಕೊಂಡರೆ ತಿಥಿ ಕಾಲ ನಕ್ಷತ್ರ ಎಲ್ಲವೂ ಬರುತ್ತವೆ.

ಅಧ್ಯಕ್ಷರು.—ನಿಮ್ಮ ಅದೃಷ್ಟ ಹಾಗೆ ಇದ್ದರೆ ನಾನು ಏನು ಮಾಡಲಿ ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ನನ್ನ ಸ್ನೇಹಿತರು ಬೇರೆ ಸೆಕ್ಷನ್‌ಗಳ ವಿಚಾರವನ್ನು ಟಚ್ ಮಾಡಿದ್ದಾರೆ. ಅಧ್ಯಕ್ಷರ ರೂಲಿಂಗಿಗೆ ವಿರುದ್ಧವಾಗಿ ನಡೆದು ಕೊಳ್ಳಬೇಕೆಂಬ ಅಭಿಪ್ರಾಯ ನನಗೆ ಇಲ್ಲ. ಈ ಬಿಲ್ಲನ್ನು ಸೆಲೆಕ್ಟ್ ಕಮಿಟಿಗೆ ಕಳುಹಿಸುವುದರಿಂದ ಆ ಸಮಿತಿಯ ಸದಸ್ಯರು ಇದನ್ನು ಕೂಲಂಕಷವಾಗಿ ವಿಮರ್ಶೆ ಮಾಡಿ ಎಲ್ಲೆಲ್ಲಿ ಲೋಪದೋಷಗಳಿವೆ, ಎಲ್ಲೆಲ್ಲಿ ಟೆನೆಂಟ್ಸ್ ಮೇಲೆ ವಿಪರೀತವಾದಂಥ ಕಠಿಣವಾದ ಕಾಯಿದೆಯನ್ನು ಉಪಯೋಗಿಸಬೇಕು ಎಂದು ಮಾಡಿದ್ದಾರೆ. ಎಲ್ಲೆಲ್ಲಿ ಶ್ರೀಮಂತರಿಗೆ ರಕ್ಷಣೆ ಕೊಡಬೇಕು ಎಂದು ಮಾಡಿದ್ದಾರೆ ಅದನ್ನು ಕೂಲಂಕಷವಾಗಿ ವಿಮರ್ಶೆ ಮಾಡಿ, ಮತ್ತೊಮ್ಮೆ ಈ ಸಭೆಗೆ ಈ ಬಿಲ್ಲು ಬಂದಾಗ ಯಾರೂ ತಕರಾರ ಹೇಳದೆ ಒಪ್ಪಿಕೊಳ್ಳುವಂತೆ ಆಗಬೇಕು ಎಂದು ಹೇಳಿ, ನನಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟುದಕ್ಕೆ ನಾನು ಅಧ್ಯಕ್ಷರನ್ನು ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

5-30 P.M.

Sri KADIDAL MANJAPPA.—Mr. Speaker, Sir, I have watched the debate very attentively, particulary, the speeches of my friend Sri Muckannappa and Sri Narasimhan. I propose to deal with the remarks made by Sri Muckannappa first. He was pleased to say that the Government was devoid of intelligence. I do not want to say that the Hon'ble Member is devoid of intelligence. I only wish to say that he should have gone through the provisions of the Bill very carefully before he made that remark. He accused the Government that they were trying to help the well-to-do sections of the people and that the Government was in the pockets of the vested interests. I am sponsoring this Bill and so far as I am concerned, I might say I have not taken a single pie's help from any rich man till now for the last 15 or 20 years.

Sri C. J. MUCKANNAPPA.—You should not forget that it is joint responsibility. I never ment that you were corrupt.

Sri KADIDAL MANJAPPA.—When people accuse others, they must feel their own pulse and they must be satisfied whether they are behaving in an ideal fashion.

Sri C. J. MUCKANNAPPA.—If there is anything that can be said on the floor of the House, I am prepared to face it. Why that '*mugam*' business ?

Sri KADIDAL MANJAPPA.—The accusation is that we are trying to help the richer land-lords.

Sri M RAMAPPA.—It is not a personal attack.

Sri KADIDAL MANJAPPA.—It is an attack against the Government and a person sponsoring the Bill.

Sri C. J. MUCKANNAPPA.—Even the other day I begged his pardon on the floor of the House. No one has begged the pardon of a person who piloted the Bill till now. Even now, I beg his pardon. I never made a single allegation against Sri Kadidal Manjappa. I say you were compelled to draft a Bill like that. It is not your own. If you had been a dictator, I could have admitted that what you said was all right. After all, yutu are compelled to draft it.

Sri KADIDAL MANJAPPA.—There is no compulsion. I am in charge of Rent Control, and for very good reasons we have exempted certain houses constructed subsequent to 1957. The reason is this, that there should be

(SRI KADIDAL MANJAPPA)

incentive for constructing new houses. If the House is not in favour of giving that exemption, I am not personally in favour of giving that exemption so far as houses constructed subsequent to 1957 are concerned.

Sri V. SRINIVAS SHETTY.—What has to happen to the persons who have invested on such a house for which fair rent has already been fixed ?

Sri K. PUTTASWAMY.—Am I to understand that the Hon'ble Minister is not in favour of retention of this clause ?

Sri KADIDAL MANJAPPA.—If the House is not in favour, I am not keen on retaining it.

Sri K. PUTTASWAMY.—Am I to understand that the Hon'ble Minister is not in favour of it ?

Sri KADIDAL MANJAPPA.—When the Minister makes a proposal that the Bill should be referred to a Joint Select Committee, it means that the Minister is willing to accept certain ammendments to be made by the Joint Select Committee.

Sri K. PUTTASWAMY.—Am I to understand that the Hon'ble Minister believes in what he is putting forward to the House ?

Sri KADIDAL MANJAPPA.—We have believed that there should be exemption in the case of houses constructed subsequent to 1957 just to encourage new construction.

Sri K. PUTTASWAMY.—I wanted the Minister to defend it boldly and not yield.

Sri S. D. KOTHAVALE.—The Minister need not be apologetic.

Mr. SPEAKER.—After all, it is for the Minister to be apologetic or firm.

Sri M. RAMAPPA.—When the Minister is very frank, they do not want him to be frank about it.

Sri KADIDAL MANJAPPA.—I do not know why my friends on the Opposition side make much of it. Sri Muckannappa was pleased to say that the Government was bent upon helping the land-lords through several provisions of the Bill. I want to know the relevant clauses in the Bill which are going to benefit the land-lords excepting the one that he mentioned, namely, the clause that provides for exemption. Which are the other provisions that are going to help the land-lords ? On the other hand, if the Bill is carefully gone through, one should come to the conclusion that it is intended to help the poor tenants and especially the poor people. He was pleased to say that on the analogy of the land reforms Bill, this Bill did not provide for taking over the surplus houses. That is not the intention of this Bill. I would welcome such socialist measures which would usher in a socialist order of society very early.

Sri Kenchappa was pleased to say that there were several loopholes in the Bill. He was trying to draw my attention to certain words and phrases. I must humbly submit that there is nothing wrong with the several phrases and words to which he referred. It is for the Select Committee to consider his suggestions. If his intention is that the law should be simple and unambiguous, I agree with him.

Sri Kothavale was pleased to say that the legislation should be in force for only five years and not ten years. Government have thought that the measure should be in operation for a period of ten years in the interests of the tenants. Now-a-days there is scarcity of houses in urban areas. In order to protect the tenants against rack-renting and against arbitrary and unlawful evictions, a measure like this is very necessary.

Sri V. SRINIVAS SHETTY.—Why fix a time limit at all ?

Sri KADIDAL MANJAPPA.—That is a matter for the House to decide.

Sri S. D. KOTHAVALE.—My view is that in the first instance it should be for five years and if the emergency continues it may be extended.

Sri KADIDAL MANJAPPA.—Sri Kothavale said that the Act should be applied on the basis of population. This suggestion can be considered by the Select Committee. A similar point was made out by Sri Sidhanti also in his fluent Kannada speech which I appreciated very much. He said that it was not fair to apply the provisions of this Bill to rural areas.

Sri Kothavale also said that the exemption in the case of houses fetching a rent of Rs. 15 and 25 should be enhanced, so that houses getting a higher rent might also be exempted. This is also a matter to be considered by the Select Committee.

About business premises, I am not in favour of granting exemption to them.

Sri Narasimhan had raised many constitutional points on which the Speaker was pleased to give a lengthy ruling. I do not want to say anything further. Later on Sri Narasimhan spoke and referred to me as a ginger Congressman. Ginger is a good medicine for several ailments unlike chilly (laughter). Sri Narasimhan said that he did not expect any measure of this type to be sponsored by me, a revolutionary Congressmen ! I have some revolutionary ideas though I do not have faith in totalitarian methods. Sri Narasimhan went on to say that the several grounds on which the tenant could not be evicted were vague and ambiguous and were likely to be misused by influential and moneyed landlords. An application for eviction has to be filed before the court and the court will consider the grounds on their own merits. There is no reason for my friend to be very apprehensive about this provision. He was also pleased to say that the tenant was not given sufficient protection. He particulary referred to Clause 41 and suggested that the tenant had not been given protection against the high-handed acts of the landlord in cutting of essential services and supplies. A perusal of this clause is sure to convince anybody that the tenant has been given sufficient protection against the high-handed action of the landlords. The clause reads :

"No landlord either himself or through any person acting or purporting to act on his behalf, shall, without just or sufficient cause cut off or withhold any essential supply or service enjoyed by the tenant in respect of the building let to him.

(2) A tenant in occupation of the building may, if the landlord has contravend the provision of sub-section (1) make an application to the Court for a direction to restore such supply or service.

(3) If the court on perusal of the application and affidavits, if any, filed by the tenant and after making such examination of the applicant as it thinks fit is *prima facie* satisfied that the essential supply or service was cut off or withheld without sufficient cause, the court may pass an interim order directing the landlords to restore the amenities immediately, pending the inquiry referred to in sub-section (4)."

This provision is sufficient to safeguard the interests of the tenant against the high-handed action of the land-lord in cutting off essential supplies and services.

Sri Narasimhan was telling that the tenant was not allowed to get the houses repaired when the land-lord neglected to repair the building. Clause 42 deals with this aspect.

"Repairs and improvements - (1) Every landlord shall be bound to keep the building in reasonably good repair.

(2) If the landlord neglects to make within a reasonable time after a notice by the tenant is served upon him, by registered post, any repairs which he is bound to make under sub-section (1), the tenant may make the repairs himself and deduct the cost of such repairs from the rent or otherwise recover it from the landlord".

Coming back to the grounds on which a tenant can be evicted,—I wish Sri Narasimhan were here—I wish to submit a few words. He was pleased to say that nuisance or annoyance mentioned in sub-clause (*d*) was not very clear and any land-lord could take advantage of these ambiguous words to evict a tenant. The sub-clause reads like this :

" that the tenant or any person residing with the tenant has been guilty of conduct which is a nuisance or annoyance to the

(SRI KADIDAL MANJAPPA)

adjoining or neighbouring occupiers, or has been convicted of using the building or allowing the building to be used for immoral or illegal purposes;"

Whether it is a nuisance or annoyance or whether it is used for immoral or illegal purpose are matters to be decided by a court and the court cannot be arbitrary in deciding these matters. So also with regard to other clauses. We cannot definitely say while making a law that such and such an Act will constitute either nuisance or annoyance. The Hon'ble Member Sri Narasimhan was suggesting that there should be no exemption in the case of buildings belonging to Government. A similar suggestion was made by my friend Sri Muckannappa. In the case of Government buildings, different considerations should apply. Government cannot be expected to harass its tenants. Nostly Government buildings are allowed to be occupied by their own servants. The servants are paying rent on the basis of the salary they get. Government cannot be expected to evict the tenants arbitrarily. Therefore the exemption provided in the Bill in the case of Government buildings is reasonable.

Sri K. PUTTASWAMY.—What about rocal bodies?

Sri KADIDAL MANJAPPA.—There is no such exemption in the case of buildings of local bodies.

Sri K. PUTTASWAMY.—Till now, under this Act the local bodies also were given exemption and a section of the members felt that the same exemption must be continued.

Sri KADIDAL MANJAPPA.—Government thought there was no need to exempt buildings belonging to local bodies. Anyhow the suggestion may be considered by the Joint Select Committee.

Sri K. KENCHAPPA.—What is the difference between "local body" and "local authority"?

Sri KADIDAL MANJAPPA.—There is not much difference according to me.

Government is in favour of having a Controller appointed by them. The system of appointing a Controller has been in vogue since 1942 in the old Mysore Area.

Sri C. S. HULKOTI.—Will the duties of the Controller be entrusted to the Revenue Department?

Sri KADIDAL MANJAPPA.—At present an officer of the Revenue Department is functioning as a Controller and there is not much complaint against his decisions.

Sri C. S. HULKOTI.—There is a complaint that they have got too much work and that they cannot attend to this work.

Sri KADIDAL MANJAPPA.—In cities like Bangalore there is need for appointing a full time Assistant Commissioner to function under the Act as a Rent Controller. But in other places there is no need to appoint a full time Assistant Commissioner; it is enough if the Assistant Commissioner is made *ex-officio* Controller. Where there is heavy work it is quite possible for Government to appoint a full time Assistant Commissioner.

Several members have found fault with the provisions relating to fixation of fair rent mentioned in Part III. It was said that uniform principles were not proposed to be adopted for fixing fair rent in the different regions of the State. The principles that we propose to adopt according to the provisions contained in the Bill are not uniform. The idea is this: the rent that should be fixed should have some relationship with the rent prevailing at the time the Rent Control Enactment came into force in the different regions of the State. For instance, in the Bombay region, rent control came into force in 1940. It is stated that while fixing fair rent in the Bombay region, *i.e.* Belgaum division, the Rent Controller shall have due regard to the rent at which the buildings were let on the 1st day of September 1940 or where they were not let on 1st day of Septemner 1940, the rent at which they were last let before the coming into operation of the Bombay Rent (Restriction) Act 1939 or the Bombay Rents, Hotel Rates and Lodging Rates (Control) Act, 1944. The purpose of adopting this

principle is to prevent undue enhancement in the rent so far as the buildings occupied at present are concerned. Suppose in the Bombay region some person is paying a rent of Rs. 100 per month. If capital value is taken as the basis and rent is determined, he may have to pay Rs. 300 for a house for which he was paying only Rs. 100. The principle for the increase of rent has been specified in the enactments that are in force in different regions. I refer to the clause which deals with fixation of fair rent in the old Mysore area.

"(2) In fixing the fair rent under sub-section (1), the Controller shall have due regard—

(*a*) to the prevailing rates of rent in the locality for the same or similar house in similar circumstances during the twelve months prior to the first day of April 1942, ;

(*b*) to the rental value as entered in the property tax assessment book of the local authority relating to the period mentioned in clause (*a*);

(*c*) to the circumstances of the case, including any amount paid by the tenant by way of premium or any other like sum in addition to rent after the first day of April, 1942.

(3) In fixing the fair rent of residential houses, the Controller may allow—

(i) if the rate of rent or rental value referred to in sub-section (2) does not exceed Rs. 25 per mensem, an increase not exceeding 33⅓ per centum on such rate or rental value."

Therefore if a uniform principle is adopted for the purpose of determining fair rent the existing tenants will be put to very great hardship. Perhaps, they may have to pay twice or thrice the rent they are now paying.

Sri V. SRINIVAS SHETTY.—You can say that in no case the rent should be enhanced, as you have said in the tenancy legislation.

Sri KADIDAL MANJAPPA.—That suggestion can be considered by the Joint Select Committee.

Sri S. D. KOTHAVALE.—All the rents throughout the State could be based on the rate prevailing in the respective areas in 1940. Let us take the Bombay model.

Sri KADIDAL MANJAPPA.—That suggestion also can be considered by the Joint Select Committee.

Dr. Nagoor was pleased to say that white-capped people were influencing the decision of cases before the Rent Controller. I only want to say that even turbaned-people also are capable of interfering in these matters.

Then he observed that Bijapur was not represented in the Joint Select Committee. We cannot give representation to all the districts while forming a Joint Select Committee. Members who are in the Joint Select Committee are expected to take into account the conditions prevailing in the different regions of the State. Resposible members have been proposed to be members of the Joint Select Committee and I am sure they will take into account the conditions prevailing in the different areas of the State.

I do not want to refer to the other smaller points referred to by Hon'ble members. Any how the Bill is being referred to a Joint Select Committee and that Committee will take into account the several suggestions made by Hon'ble members. On the whole the Bill is an essential piece of legislation. It seeks to enact uniform law on the subject of rent control. It is helpful to safeguard the interests of tenants. I commend this measure for the kind consideration of this House.

Mr. SPEAKER.—The question is:

"That this House concurs in the appointment of a Joint Select Committee of the two Houses consisting of a total number of 18 members—12 members from the Legislative Assembly and 6 members from the Legislative

(MR. SPEAKER)

Council, to consider the Mysore Rent Control Bill, 1959, and that the following members of this House shall be members of the Joint Select Committee :

Sriyuts—

1 H. V. Koujalgi
2 T. Hanumaiah
3 Kumara Naik
4 F. H. Mohsin
5 D. T. Seetharama Rao
6 R. C. Patil
7 K. S. Suryanarayana Rao
8 Dr. T. Parthasarathy
9 T. D. Maranna
10 K. T. Jambanna
11 G. N. Puttanna
12 C. K. Rajaiah Setty"

The motion was adopted.

Member's representation.

SRI U. M. MADAPPA.—Sir, today morning the Minister for Law, Labour and Local Self-Government laid some papers on the Table of the House. Copies of the same are not available either in the pigeon-holes or on the Table. How can we send amendments to the same if we do not have copies of those papers with us ?

MR. SPEAKER.—They will be supplied.

The House now adjourns and will re-assemble at 1 P.M. tomorrow.

The House adjourned at Six of the Clock to meet again at One of the Clock on Tuesday, the 8th December 1959.

WD 1861—GPB—900—10-4-1961